Officers Adda

# ಪ್ರಚಲಿತ ವಿದ್ಯಮಾನಗಳು

## Sept 09 to 12 2023

By BHARAT C N
BE (MECH)

# ವಿಶ್ವದ ಗಮನ ಸೆಳೆದ ಭಾರತ

- G20 ಇತಿಹಾಸ ಮತ್ತು ಹಿನ್ನೆಲೆ
- G20 v/s G7 ಏನು ಸಂಬಂಧ?
- Troika ಅಂದ್ರೆ ಏನು?
- Global Biofuel Alliance
- India-middle East- Europe Corridor
- G20 ಗೆ ಹೊಸ ಸದಸ್ಯ ಯಾರು ಗೊತ್ತಾ?

✓ ಸ್ವಚ್ಛ ವಾಯು ಸರ್ವೇಕ್ಷಣ್ 2023
✓ ಪ್ರಧಾನ ಮಂತ್ರಿ ಉಜ್ವಲ ಯೋಜನೆ
✓ ICBM Test
✓ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ 2023
✓ ಟ್ರಾನ್ಸ್ಜೆಂಡರ್ ಸಮುದಾಯ
✓ ಕಚ್ಚಾ ತೈಲ ಬೆಲೆ
✓ ಕೂಲಿಂಗ್ ಆಫ್ ಪಿರಿಯಡ್
✓ ಅಡಾಪ್ಟ ಅ ಹೆರಿಟೇಜ್
✓ ರಾಜ್ಯಸಭೆಯ 25 ಮಸೂದೆಗಳು
✓ VVPAT MACHINE
✓ I- CRR
✓ INPC
✓ MICRO ISSUE
✓ ONE LINER
✓ GOLDEN THOUGHT

G20 भारत 2023 INDIA

ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನಗಳು
ಕನ್ನಡ ಮಾಧ್ಯಮದಲ್ಲಿ

Subscribe to

# OFFICERS ADDA

## You Tube & Telegram Channel

By BHARAT C N

# ಪ್ರತಿದಿನದ ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆ




For

## KAS/IAS/IPS/PSI/FDA/SDA/PC/BANKING

Exams

**Officers Adda YouTube channel By BHARAT sir**

Officers Adda
61.1K subscribers

Kannada Medium Current Affairs for all competitive exams (PC to DC) by BHARAT sir
For more updates subscribe to
OFFICERS ADDA telegram and You tube channel

Officers Adda Telegram channel :

https://t.me/officersadda

Course Details :

https://drive.google.com/file/d/1GuP8...

app link :

https://play.google.com/store/apps/de...

follow us on insta :

https://www.instagram.com/officersadd...

Telegram channel for essay and answers writing :

https://t.me/Art_Of_Answer_Writing1

June Current Affairs :

https://drive.google.com/file/d/1JROE...

oct current affairs :

https://drive.google.com/file/d/1KePH...

december current affairs:





IndianMoney's Finan...
Ad 4.2 ★ FREE
INSTALL


#Daily#Kannadamedium #Top10MCQ #BharatSir #short

2.3K views · Streamed 23 hours ago

226 | 3 | Live chat | Share | Dowı

Officers Adda
61.1K subscribers
SUBSCRIBED

ಗ್ರಾಮೀಣ ಪ್ರದೇಶದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ

# OFFICERS ADDA ದ ಉಚಿತ ಸೇವೆಗಳು

- ಪ್ರತಿದಿನದ ಪ್ರಚಲಿತ ವಿದ್ಯಮಾನಗಳು
- (YouTube ನಲ್ಲಿ)
- ಪ್ರಚಲಿತ ವಿದ್ಯಮಾನಗಳ ಪಿಡಿಎಫ್
- ಮಾಸಿಕ ಪ್ರಚಲಿತ ವಿದ್ಯಮಾನಗಳು ಕೈಪಿಡಿ (officers adda telegram)
- ಒಂದು ವರ್ಷದ ಪ್ರಚಲಿತ ವಿದ್ಯಮಾನಗಳ ಕೈಪಿಡಿ (officers adda telegram)
- Art of Answer writing ಇಲ್ಲಿ ಪ್ರತಿದಿನ ಪ್ರಬಂಧಗಳು, ಕೆಎಎಸ್ ಮುಖ್ಯ ಪರೀಕ್ಷೆಯ ಪ್ರಶ್ನೆಗಳು ಮತ್ತು ಪಿಎಸ್ಐ ಸಂಬಂಧಿತ ಭಾಷಾಂತರ ಕೊಡಲಾಗುತ್ತದೆ.
- ವಿದ್ಯಾರ್ಥಿಗಳೊಂದಿಗೆ ಗೂಗಲ್ ಮೀಟ್ ಮುಖಾಂತರ ಸಲಹೆ ಮತ್ತು ಸೂಚನೆ. (8217546761)
- Daily Practice MCQ's in Telegram and YouTube
- Strategy classes for all type competitive exams
- ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ಯೂಟ್ಯೂಬ್ ನಲ್ಲಿ ಚರ್ಚೆ
- ಸಾಧಕರ ಜೊತೆ ಸಂದರ್ಶನಗಳು.
- ಇನ್ನು ಹಲವಾರು


9:21
74%
Officers Adda
Officers Adda V2
Officers Adda
Uninstall
Open
What's new
Last updated Sep 12, 2022
Bugs Fixing
About this app
Officers Adda is a hub for current affairs and Competitive exams preparation.
Education
4.7 ★
27 reviews
9.2 MB
12+
Rated for 12
OFFICERS ADDA
APP
Officers Adda

Officers Adda

Let's start with
full Josh and full Enthusiasm



- BIG ISSUES
- MINI ISSUES
- MICRO ISSUES
- INPC
- ONE LINER

Officers Adda

- **BIG ISSUES**

Officers Adda

# INTERNATIONAL ISSUES




G20
भारत 2023 INDIA
वसुधैव कुटुम्बकम्
ONE EARTH • ONE FAMILY • ONE FUTURE
Graphic Tasveer

# G 20

- ಜಿ ಟ್ವೆಂಟಿ ಶೃಂಗಸಭೆಯ ಇತಿಹಾಸ ಮತ್ತು ಹಿನ್ನೆಲೆ
- 1970ರ ದಶಕದಲ್ಲಿ ಜಗತ್ತಿನಾದ್ಯಂತ ಕಚ್ಚಾತೈಲದ ಅಭಾವ ಉಂಟಾಯಿತು.
- ಅರಬ್ ರಾಷ್ಟ್ರಗಳು ಜಗತ್ತಿಗೆ ಪೂರೈಕೆ ಮಾಡುತ್ತಿದ್ದ ಕಚ್ಚಾತೈಲವನ್ನು ಕಡಿತಗೊಳಿಸಿದವು.
- ಇದರಿಂದ ಜಾಗತಿಕವಾಗಿ ಆರ್ಥಿಕ ಬಿಕ್ಕಟ್ಟು ಸೃಷ್ಟಿಯಾಯಿತು.
- ಈ ಆರ್ಥಿಕ ಬಿಕ್ಕಟ್ಟಿನಿಂದ ಆರ್ಥಿಕ ಹಿಂಜರಿತ ಮತ್ತು ನಿರುದ್ಯೋಗ ಸಮಸ್ಯೆ ಜಗತ್ತಿನಾದ್ಯಂತ ಹೆಚ್ಚಾಗ ತೊಡಗಿತು.

Officers Adda



- ಇರುವ ಸಮಸ್ಯೆಯನ್ನು ಹೋಗಲಾಡಿಸುವುದು ಮತ್ತು ಮುಂದಿನ ದಿನಗಳಲ್ಲಿ ಜಾಗತಿಕವಾಗಿ ಈ ರೀತಿಯ ಯಾವುದೇ ತೊಂದರೆಗಳು ಬಾರದಂತೆ ಜಿ6 ಶೃಂಗಸಭೆಯನ್ನು 1975 ರಲ್ಲಿ ಆರಂಭಿಸಲಾಯಿತು.

- ಪ್ರತಿ ವರ್ಷ ಒಂದೊಂದು ದೇಶ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಜಾಗತಿಕ ವಿದ್ಯಮಾನಗಳ ಕುರಿತು ಚರ್ಚೆ ಮಾಡಿ ಅವರವರ ಆರ್ಥಿಕತೆಯನ್ನು ರಕ್ಷಿಸಿಕೊಳ್ಳುವುದು ಇದರ ಉದ್ದೇಶವಾಗಿತ್ತು.

- ಮೊದಲ ಶೃಂಗ ಸಭೆ ಫ್ರಾನ್ಸ್ ದೇಶದಲ್ಲಿ ನಡೆಯಿತು.

Officers Adda



- ಈ ಗುಂಪನ್ನು 1976 ರಲ್ಲಿ ಕೆನಡಾ ದೇಶ ಸೇರ್ಪಡೆಯಾಯಿತು ನಂತರ ಇದರ ಹೆಸರು G7 ಆಯಿತು.

- ಆ ಏಳು ದೇಶಗಳು

- ಫ್ರಾನ್ಸ್ ,ಜರ್ಮನಿ ,ಅಮೇರಿಕಾ, ಜಪಾನ್, ಇಟಲಿ, ಕೆನಡಾ ಮತ್ತು ಯುನೈಟೆಡ್ ಕಿಂಗ್ಡಮ್.






- **G7 ದೇಶಗಳ ನಡುವಿನ ಸಾಮ್ಯತೆ**

- ಏಳು ದೇಶಗಳು ಮುಕ್ತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿದ್ದವು.
- ಮಾನವ ಹಕ್ಕುಗಳನ್ನು ಕಾಪಾಡುವ ಉದ್ದೇಶ.
- ವೈಯಕ್ತಿಕ ಸ್ವಾತಂತ್ರ್ಯದ ಪ್ರತಿಪಾದನೆ.
- ಈ ಗುಂಪಿಗೆ 1998ರಲ್ಲಿ ರಷ್ಯಾ ದೇಶ ಸೇರ್ಪಡೆಯಾಯಿತು.

Officers Adda



- ಈಗ ಗುಂಪಿನ ಹೆಸರು ಜಿ8 ಆಯ್ತು ಆದರೆ ಈ ಹೆಸರು ಬಹಳ ದಿನ ಉಳಿಯಲಿಲ್ಲ.

- 2014ರಲ್ಲಿ ರಷ್ಯ ಉಕ್ರೇನ್ (ಕ್ರೀಮಿಯ) ಮೇಲೆ ನಡೆಸಿದ ದಾಳಿಯಿಂದಾಗಿ ರಷ್ಯಾ ದೇಶವನ್ನು ಈ ಗುಂಪಿನಿಂದ ಹೊರಹಾಕಲಾಯಿತು.






- 1997ರಲ್ಲಿ ಜಾಗತಿಕವಾಗಿ ಮತ್ತೊಮ್ಮೆ ಆರ್ಥಿಕ ಹಿಂಜರಿತ ಆರಂಭವಾಯಿತು.

- ಇದಕ್ಕೆ ದಕ್ಷಿಣ ಕೋರಿಯಾ, ಇಂಡೋನೇಷ್ಯಾ ಮತ್ತು ಥೈಲ್ಯಾಂಡ್ ದೇಶಗಳು ಪ್ರಮುಖವಾಗಿ ಕಾರಣವಾಗಿದ್ದು. ಇದರ ಪ್ರಭಾವ ಆಗ್ನೇಯ ಏಷ್ಯಾ ರಾಷ್ಟ್ರಗಳು ಮತ್ತು ಜಗತ್ತಿನ ಇತರ ರಾಷ್ಟ್ರಗಳ ಮೇಲೆ ಬೀರಲಾರಂಭಿಸಿತು.

- ಹೀಗಾಗಿ ಜಾಗತಿಕವಾಗಿ ಎದುರಾಗುವ ಸಮಸ್ಯೆಗಳನ್ನು ನಿರ್ವಹಿಸಲು ಜಗತ್ತಿನ ಪ್ರಮುಖ ರಾಷ್ಟ್ರಗಳ ಗುಂಪನ್ನು ರಚಿಸುವುದು ಅನಿವಾರ್ಯವಾಯಿತು.

- ಈ ಅವಶ್ಯಕತೆಯನ್ನು ನೀಗಿಸಲು ಸಪ್ಟಂಬರ್ 26, 1999 ರಲ್ಲಿ ಜಿ20 ಗುಂಪನ್ನು ರಚಿಸಲಾಯಿತು.

Officers Adda



- ಈ ಗುಂಪಿನಲ್ಲಿ ಪ್ರಾದೇಶಿಕವಾಗಿ ಇರುವ ಶಕ್ತಿಶಾಲಿ ರಾಷ್ಟ್ರಗಳು ಹಾಗೂ ಯುರೋಪ್ ಖಂಡದಿಂದ ಯುರೋಪಿಯನ್ ಒಕ್ಕೂಟವನ್ನು ಸೇರ್ಪಡೆ ಮಾಡಲಾಯಿತು.

- ಮೊದಲಿನಿಂದಲೇ ಈ ಗುಂಪಿನಲ್ಲಿ ಜಿ8 ರಾಷ್ಟ್ರಗಳನ್ನು ಭಾಗಿ ಮಾಡಲಾಯಿತು.

- 1999 ರಿಂದ 2008ರ ವರೆಗೆ ಈ ಸಭೆಯಲ್ಲಿ ಆಯಾ ದೇಶಗಳ ವಿತ್ತ ಸಚಿವರು ಹಾಗೂ ಕೇಂದ್ರೀಯ ಬ್ಯಾಂಕಿನ ಗವರ್ನರ್ ಗಳು ಮಾತ್ರ ಭಾಗವಹಿಸುತ್ತಿದ್ದರು

Officers Adda



- 2008ರಲ್ಲಿ ಜಾಗತಿಕವಾಗಿ ಆರ್ಥಿಕ ಬಿಕ್ಕಟ್ಟು ಮತ್ತೊಮ್ಮೆ ತಲೆದೂರಿತು.
- ಆ ವರ್ಷದಿಂದಲೇ ಈ ಶೃಂಗಸಭೆಯಲ್ಲಿ ಆಯಾ ದೇಶದ ಮುಖ್ಯಸ್ಥರು ಭಾಗವಹಿಸುವಂತೆ ಆದೇಶಿಸಲಾಯಿತು.
- ಇದರ ಜೊತೆಗೆ ವಿಶ್ವ ಬ್ಯಾಂಕ್ ,ವಿಶ್ವಸಂಸ್ಥೆ ಹಾಗೂ ಅಂತರಾಷ್ಟ್ರೀಯ ಹಣಕಾಸು ನಿಧಿಯ ಮುಖ್ಯಸ್ಥರು ಕೂಡ ಭಾಗವಹಿಸುವಂತೆ ಆದೇಶಿಸಲಾಯಿತು.
- ಮತ್ತು ಪ್ರತಿ ವರ್ಷ ಒಂದೊಂದು ಸದಸ್ಯ ರಾಷ್ಟ್ರಗಳಲ್ಲಿ ಸಭೆ ನಡೆಸಲು ಉದ್ದೇಶಿಸಲಾಯಿತು.
- ವ್ಯಾಪಾರಕ್ಕಿರುವ ಅಡೆತಡೆಗಳನ್ನು ಕಡಿಮೆ ಮಾಡುವುದು ಮತ್ತು ಅಭಿವೃದ್ಧಿ ಹೊಂದುತ್ತಿರುವ ಮತ್ತು ಹಿಂದುಳಿದ ರಾಷ್ಟ್ರಗಳಲ್ಲಿ ಸಾಧ್ಯವಾದಷ್ಟು ಹೂಡಿಕೆ ಮಾಡುವುದು ಇದರ ಒಂದು ಉದ್ದೇಶವಾಯಿತು.

Officers Adda



- ಜಿ ಟ್ವೆಂಟಿ ಜಗತ್ತಿನ ಶೇಕಡ 85ರಷ್ಟು ಜಿಡಿಪಿಯನ್ನು ಹೊಂದಿದೆ.
- ಜಾಗತಿಕ ವ್ಯಾಪಾರದ ಶೇಕಡ 75ರಷ್ಟು ಹೊಂದಿದೆ.
- ಜಿ ಟ್ವೆಂಟಿ ಶೃಂಗಸಭೆಗಳು ಸದಸ್ಯರ ದೇಶಗಳಲ್ಲಿ ಪ್ರತಿ ವರ್ಷ ನಡೆಯುತ್ತವೆ.
- ಮುಂದಿನ G20 ಶೃಂಗಸಭೆ ನಡೆಯುವುದು( IN INDIA ) ಬಹುತೇಕ 2042ರ ಹೊತ್ತಿಗೆ.

Officers Adda




- **Troika system**

- ಈ ವ್ಯವಸ್ಥೆಯಲ್ಲಿ ಹಿಂದಿನ ವರ್ಷದ ಅಧ್ಯಕ್ಷರು, ಈ ವರ್ಷದ ಅಧ್ಯಕ್ಷರು ಮತ್ತು ಮುಂದಿನ ವರ್ಷದ ಅಧ್ಯಕ್ಷರ ಒಂದು ಗುಂಪನ್ನು ಮಾಡಲಾಗುತ್ತದೆ.

- (ಸದ್ಯಕ್ಕೆ ಇಂಡೋನೇಷ್ಯಾ, ಭಾರತ ಮತ್ತು ಬ್ರೆಜಿಲ್)

- ಈ ಶೃಂಗಸಭೆಗೆ ಯಾವುದೇ ಖಾಯಂ ಸಚಿವಾಲಯ ಯಾವುದೇ ದೇಶದಲ್ಲಿ ಇರುವುದಿಲ್ಲ.






- ಯಾವ ದೇಶ ಅಧ್ಯಕ್ಷತೆಯನ್ನು ಹೊಂದಿರುತ್ತದೆಯೋ ಆದೇಶ ಸದಸ್ಯರಲ್ಲದ ರಾಷ್ಟ್ರಗಳನ್ನು ಅತಿಥಿಗಳಾಗಿ ಈ ಶೃಂಗಸಭೆಗೆ ಆಹ್ವಾನಿಸಬಹುದು.

- ಭಾರತ ದೇಶ ಒಟ್ಟು ಒಂಬತ್ತು ದೇಶಗಳನ್ನ ಆಹ್ವಾನಿಸಿದೆ.

- ಬಾಂಗ್ಲಾದೇಶ
- ಈಜಿಪ್ಟ್
- ಮರೀಷಿಯಸ್
- ನೆದರ್ಲ್ಯಾಂಡ್
- ನೈಜೀರಿಯಾ
- ಸಿಂಗಾಪುರ್
- ಸ್ಪೇನ್
- ಯು ಇ ಇ
- ಒಮಾನ್


Officers Adda



- ಈ ವರ್ಷ ಭಾರತ ದೇಶ ಸುಸ್ಥಿರ ಅಭಿವೃದ್ಧಿ ,ಡಿಜಿಟಲ್ ಮೂಲಸೌಕರ್ಯ, ಮಹಿಳಾ ಆಧಾರಿತ ಅಭಿವೃದ್ಧಿ ಮುಂತಾದವುಗಳ ಮೇಲೆ ಕೇಂದ್ರೀಕರಣ ಮಾಡಿದೆ.
- ಇದರ ಜೊತೆ ಜೊತೆಗೆ ಕೆಲವು ಸಮ್ಮೇಳನಗಳನ್ನು ನಡೆಸಲಾಗಿತ್ತು.
- B20 business
- C20 civil society
- W 20 women
- Y20 Youth
- T20 think tank

Officers Adda




Launch of
Global Biofuels Alliance
Initiating Members

G20
भारत 2023 INDIA
Officers
Adda

- **Global biofuels alliance**

- ಭಾರತದ ನೇತೃತ್ವದಲ್ಲಿ **ಜಾಗತಿಕ ಜೈವಿಕ ಇಂಧನಗಳ** ಗುಂಪನ್ನು ರಚಿಸಲಾಯಿತು.

- ಇದನ್ನು ಅಧಿಕೃತವಾಗಿ **ನರೇಂದ್ರ ಮೋದಿ ಅವರು ಘೋಷಣೆ** ಮಾಡಿದರು.

- ಎಲ್ಲ ಸದಸ್ಯ ರಾಷ್ಟ್ರಗಳು **ಪೆಟ್ರೋಲ್ ನಲ್ಲಿ 20ರಷ್ಟು ಎಥನಾಲ್ ಮಿಶ್ರಣ** ಮಾಡುವ ಕ್ರಮ ಕೈಗೊಳ್ಳಬೇಕು ಎಂದು ನರೇಂದ್ರ ಮೋದಿಯವರು ಮನವಿ ಮಾಡಿದರು.

- ಶೇಕಡ 20ರಷ್ಟು ಅಥವಾ ಅದಕ್ಕಿಂತ **ಹೆಚ್ಚು ಕಡಿಮೆ ಮಿಶ್ರಣ ಮಾಡಲು ಪ್ರತಿಯೊಂದು ರಾಷ್ಟ್ರ ಕ್ರಮ ಕೈಗೊಳ್ಳಬೇಕು** ಎಂದು ನರೇಂದ್ರ ಮೋದಿಯವರು ಘೋಷಿಸಿದರು.




Officers Adda

- ಅಮೆರಿಕಾದ ಅಧ್ಯಕ್ಷರು, ಬ್ರೆಜಿಲ್ ನ ಅಧ್ಯಕ್ಷರು, ಬಾಂಗ್ಲಾದೇಶದ ಪ್ರಧಾನ ಮಂತ್ರಿಗಳು ಮತ್ತು ಇಟಲಿಯ ಪ್ರಧಾನ ಮಂತ್ರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

- **Members are**
  - India
  - Argentina
  - Bangladesh
  - Brazil
  - Italy
  - Mauritius
  - South Africa
  - UAE and
  - United States
- **Canada and Singapore are observer countries.**

Officers Adda



- ಶುದ್ಧ ಇಂಧನದ ಕಡೆ ಹೋಗಲು ಇದೊಂದು ಒಳ್ಳೆಯ ಅವಕಾಶ.
- Global biofuel alliance
- 2070ರ ವೇಳೆಗೆ ಕಾರ್ಬನ್ ಹೊರ ಸೂಸುವಿಕೆಯನ್ನು ಸಂಪೂರ್ಣ ಕಡಿತಗೊಳಿಸಲಿದೆ.
- 2015ರಲ್ಲಿ ಭಾರತ ಮತ್ತು ಫ್ರಾನ್ಸ್ ದೇಶಗಳು ಅಂತರಾಷ್ಟ್ರೀಯ ಸೌರ ಕೂಟವನ್ನು ಆರಂಭಿಸಿದ್ದವು.

Officers Adda



- ಜೈವಿಕ ಇಂಧನಗಳು

- ಇವುಗಳು ಜೀವಿಯಿಂದ ಉತ್ಪಾದನೆಯಾದಂತಹ ಇಂಧನಗಳಾಗಿವೆ.

- ಭಾರತದಲ್ಲಿ ಕೃಷಿ ವಲಯದ ವಸ್ತುಗಳು ಅದರಲ್ಲೂ ಕಬ್ಬಿನಿಂದ ಅತಿ ಹೆಚ್ಚು ಎಥ್‌ನಾಲನ್ನು ತಯಾರಿಸಲಾಗುತ್ತದೆ.

- ಆದರೆ ಕಬ್ಬನ್ನು ಬೆಳೆಯಲು ಅತಿ ಹೆಚ್ಚಿನ ನೀರಿನ ಅವಶ್ಯಕತೆ ಇದೆ.

- ನೀತಿ ಆಯೋಗದ ವರದಿ ಹೇಳುವ ಪ್ರಕಾರ ದೇಶದಲ್ಲಿ ಉತ್ಪಾದನೆಯಾಗುವ ಶೇಕಡ 90ರಷ್ಟು ಎಥನಾಲ್ ಕಬ್ಬಿನಿಂದ ಬರುತ್ತದೆ.

Officers Adda



- ಈ ರೀತಿಯ ಜೈವಿಕ ಇಂಧನಗಳಿಂದ ಬೇರೆ ದೇಶದ ಮೇಲೆ ಭಾರತ ಕಚ್ಚಾ ತೈಲಕ್ಕಾಗಿ ಅವಲಂಬನೆ ಆಗಿರುವುದು ಕಡಿಮೆಯಾಗುತ್ತದೆ.

- ಇದರಿಂದ ರೂಪಾಯಿ ಅಪಮೌಲೀಕರಣವನ್ನು ಯಶಸ್ವಿಯಾಗಿ ತಡೆಯಬಹುದು.


- ಇದಾಗಲೇ ಜೈವಿಕ ಇಂಧನ ಕ್ಷೇತ್ರದಲ್ಲಿ ಜಾಗತಿಕವಾಗಿರುವ ಅತ್ಯುತ್ತಮ ವಿಧಾನಗಳನ್ನು ಪರಸ್ಪರ ಹಂಚಿಕೊಳ್ಳಲು ಭಾರತ ದೇಶ ಮನವಿ ಮಾಡಿದೆ.

- ಭಾರತ ದೇಶ 2025ರ ವೇಳೆಗೆ ಪೆಟ್ರೋಲ್ ನಲ್ಲಿ ಶೇಕಡ 20ರಷ್ಟು ಎಥನಾಲ್ ಮಿಶ್ರಣ ಮಾಡುವ ಗುರಿ ಹೊಂದಿದೆ.

Officers Adda



- **India-Middle East-Europe connectivity corridor launched at G20**






# India-Middle East-Europe Economic Corridor

## Participants

- Saudi Arabia
- European Union
- India
- United Arab Emirates
- France
- Germany
- Italy
- United States

BQ PRIME



- India-Middle East-Europe connectivity corridor launched at G20

- India unvealed plans to create a modern day spice route.

- ಇದರಿಂದ ಈ ಪ್ರದೇಶದಲ್ಲಿ ಸಾಕಷ್ಟು ಆರ್ಥಿಕತೆಗೆ ಅವಕಾಶ ಸಿಗುತ್ತದೆ.

- ಅಮೆರಿಕ, ಸೌದಿ ಅರೇಬಿಯಾ, ಯುರೋಪಿಯನ್ ಒಕ್ಕೂಟ, ಯುಎಇ ಮುಂತಾದ ದೇಶಗಳು ಈ ಯೋಜನೆಯ ಮೂಲಕ ರೈಲ್ವೆ, ಬಂದರುಗಳು, ಎಲೆಕ್ಟ್ರಿಕ್ ನೆಟ್ವರ್ಕ್ ಗಳು ಹಾಗೂ ಹೈಡ್ರೋಜನ್ ಪೈಪ್ ಲೈನ್ ಗಳನ್ನು ನಿರ್ಮಿಸಲು ಯೋಜನೆ ಹಾಕಿಕೊಂಡಿವೆ.

Officers Adda



- ಈ ಯೋಜನೆಯ ಮೂಲಕ ಚೀನಾಗಿ ಸವಾಲೊಡ್ಡಬಹುದು.

- ಮಧ್ಯ ಏಷ್ಯಾದ ದೇಶಗಳ ಆರ್ಥಿಕತೆ ಶಕ್ತಿ ಬರುತ್ತದೆ ಹಾಗೂ ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳ ನಡುವಿನ ಸಂಬಂಧ ಸುಧಾರಣೆ ಆಗುತ್ತದೆ.


- ಭಾರತ ಮತ್ತು ಮಧ್ಯ ಪ್ರಾಚ್ಯ ದೇಶಗಳಿಂದ ಯುರೋಪ್ ಖಂಡಕ್ಕೆ ಸಾಕಷ್ಟು ವಸ್ತುಗಳನ್ನು ರಫ್ತು ಮಾಡಬಹುದು.

- ಈ ದೇಶಗಳು ಭಾರತದಲ್ಲಿ ಹೂಡಿಕೆ ಮಾಡಲು ಅವಕಾಶ ನೀಡಿದಂತಾಗುತ್ತದೆ.

- ಯು ಎ ಇ, ಸೌದಿ ಅರೇಬಿಯಾ, ಜಾರ್ಡನ್ ಮತ್ತು ಇಸ್ರೇಲ್ ಗಳನ್ನು ರೈಲ್ವೆ ಗಳ ಮೂಲಕ ಸಂಪರ್ಕ ಕಲ್ಪಿಸುವ ಯೋಜನೆ ಹಾಕಿಕೊಳ್ಳಲಾಗಿದೆ.

Officers Adda




THE ECONOMIC CORRIDOR
--- Sea Route
— Rail Route
Haifa
Al Haditha
Riyadh
Dubai/ Jebel Ali
Piraeus
Haradh
Al Gheweifat
Mumbai


G20
भारत 2023 INDIA
Officers Adda

- ಈ ಯೋಜನೆಯಿಂದ ಭಾರತ ಮತ್ತು ಯುರೋಪ್ ನಡುವಿನ ವ್ಯಾಪಾರ ವಹಿವಾಟು ಶೇಕಡ 40ರಷ್ಟು ಹೆಚ್ಚುವ ಸಾಧ್ಯತೆ ಇದೆ.
- ಸುಯೆಜ್ ಕಾಲುವೆಗೆ ಇದು ಪರ್ಯಾಯಮಾರ್ಗವಾಗಿ ಬಳಕೆಯಾಗುತ್ತದೆ.
- ಈ ಕಾಲುವೆಯಲ್ಲಿ ಜಗತ್ತಿನ ಶೇಕಡ 10ರಷ್ಟು ಹಡಗುಗಳು ಹಾಯ್ದು ಹೋಗುತ್ತವೆ ಕೆಲವು ಬಾರಿ ತೊಂದರೆಗಳಾಗುವ ಸಾಧ್ಯತೆ ಇರುತ್ತದೆ.
- (2021 ರಲ್ಲಿ Ever Green ಎಂಬ ಹಡಗಿನ ತೊಂದರೆಗಳು)

Officers Adda



- ಈ ಯೋಜನೆಗೆ ಅಮೆರಿಕಾದ ಅಧ್ಯಕ್ಷರು ಅತ್ಯಂತ ಮೂತುವರ್ಜಿ ವಹಿಸಿದ್ದಾರೆ ಕಾರಣ ಈ ಯೋಜನೆಯಿಂದ ಚೀನಾ ದೇಶವನ್ನು ಏಷ್ಯಾದಲ್ಲಿ ಕಟ್ಟಿ ಹಾಕಬಹುದು.

- ಹಾಗೂ ಈ ಯೋಜನೆಯಿಂದ ಅಮೆರಿಕ ಮತ್ತು ಸೌದಿ ಅರೇಬಿಯಾದ ಸಂಬಂಧಗಳು ಸರಿ ಹೊಂದಲಿವೆ.

- ಇತ್ತೀಚಿನ ಅಮೆರಿಕ ಮತ್ತು ಇರಾನ್ ನಡುವಿನ ಅಣು ಒಪ್ಪಂದದಿಂದ ಸೌದಿ ಅರೇಬಿಯಾ ಜೊತೆಗಿನ ಸಂಬಂಧಗಳು ಹದಗೆಟ್ಟಿದ್ದವು.






- ಈ ಕಾರೀಡರ್ ಮೂಲಕ ಹಸಿರು ಹೈಡ್ರೋಜನ್ ಅನ್ನು ಆಮದು ರಫ್ತು ಮಾಡಲಾಗುತ್ತದೆ.

- ಈ ಯೋಜನೆಯಿಂದ ಕೇವಲ ಕಚ್ಚಾ ತೈಲದ ಮೇಲೆ ಅವಲಂಬಿತವಾಗಿರುವ ಮಧ್ಯ ಪ್ರಾಚ್ಯ ದೇಶದ ಆರ್ಥಿಕತೆಗೆ ಶಕ್ತಿ ದೊರೆತಂತಾಗುತ್ತದೆ.

Officers Adda



- ಹೊಸ ಖಾಯಂ ಸದಸ್ಯ ರಾಷ್ಟ್ರವಾಗಿ ಆಫ್ರಿಕಾ ಒಕ್ಕೂಟ ಸೇರ್ಪಡೆ






# African Union

au.int

The African Union is a continental union consisting of 55 member states located on the continent of Africa. The AU was announced in the Sirte Declaration in Sirte, Libya, on 9 September 1999, calling for the establishment of the African Union. Wikipedia

**Headquarters:** Addis Ababa, Ethiopia

**Founded:** 9 July 2002, Durban, South Africa

**Founder:** Muammar Gaddafi

**Official languages:** Arabic; English; French; Portuguese; Spanish; Swahili; and any other African language;

**Demonym(s):** African

**GDP (nominal):** 2020 estimate


**HDI (2020):** 0.577; medium






Officers Adda

- ಹೊಸ ಖಾಯಂ ಸದಸ್ಯ ರಾಷ್ಟ್ರವಾಗಿ ಆಫ್ರಿಕಾ ಒಕ್ಕೂಟ ಸೇರ್ಪಡೆ



**G20**

Group of Twenty

All leaders at the 2021 G20 Summit in Rome, Italy.

Member countries of the G20

Countries represented through the membership of the European Union

Countries represented through the membership of the African Union

Countries permanently invited (Spain)

| | |
|---|---|
| **Formation** | 26 September 1999 (23 years ago)<br>2008 (heads-of-state/heads-of-government summits) |
| **Type** | International organization |
| **Purpose** | Bring together systemically important industrialized and developing economies to discuss key issues in the global economy.[1] |
| **Membership** | 21 members[a] [show] |
| **Chairman (Incumbent)** | Lula Da Silva, President of Brazil |
| **Website** | g20.org [2] |




s Adda

- ಜಿ ಟ್ವೆಂಟಿ ಶೃಂಗಸಭೆಗೆ ಹೊಸ ಸದಸ್ಯರ ನೇಮಕವಾಗಿದೆ..
- ಆಫ್ರಿಕನ್ ಒಕ್ಕೂಟವನ್ನು ಶಾಶ್ವತ ಸದಸ್ಯ ರಾಷ್ಟ್ರವನ್ನಾಗಿ ಮಾಡಲಾಗಿದೆ ಎಂದು ನರೇಂದ್ರ ಮೋದಿಯವರು ತಿಳಿಸಿದ್ದಾರೆ.
- ಇದಕ್ಕಾಗಿ ಭಾರತ ಕಳೆದ ಸಾಕಷ್ಟು ವರ್ಷಗಳಿಂದ ತಯಾರಿ ನಡೆಸಿದ್ದು.
- ಆಫ್ರಿಕಾ ಖಂಡದ 55 ರಾಷ್ಟ್ರಗಳ ಆಫ್ರಿಕಾ ಒಕ್ಕೂಟವನ್ನು 21ನೇ ರಾಷ್ಟ್ರವನ್ನಾಗಿ ಮಾಡಲಾಗಿದೆ ..

Officers Adda



- **Global South**






- ಇವರಿಗೆ ಆಫ್ರಿಕಾ ಖಂಡದ ದಕ್ಷಿಣ ಆಫ್ರಿಕಾ ಮಾತ್ರ ಸದಸ್ಯತ್ವವನ್ನು ಹೊಂದಿತ್ತು.

- 2015ರ ಭಾರತ ಮತ್ತು ಆಫ್ರಿಕಾ ಸಮ್ಮೇಳನದಿಂದಲೇ ಈ ಪ್ರಯತ್ನಗಳು ಆರಂಭವಾಗಿದ್ದವು.

- ಕಳೆದ 9 ವರ್ಷದಲ್ಲಿ ನರೇಂದ್ರ ಮೋದಿ ಅವರು ಆಫ್ರಿಕಾದ ಸುಮಾರು 9 ದೇಶಗಳಿಗೆ ಭೇಟಿ ನೀಡಿದ್ದಾರೆ.

- ಭಾರತದ ಮಂತ್ರಿಗಳು ಬಹುತೇಕ ಆಫ್ರಿಕಾದ ಎಲ್ಲಾ ದೇಶಗಳಿಗೆ ಭೇಟಿ ನೀಡಿದ್ದಾರೆ.

Officers Adda



- ಆಫ್ರಿಕಾ ಒಕ್ಕೂಟ ಸೇರ್ಪಡೆಯಿಂದ ಭಾರತಕ್ಕಾಗುವ ಲಾಭಗಳು

- ಭಾರತ ದೇಶ ಆಫ್ರಿಕಾದ ಬೃಹತ್ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಬಹುದು.

- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಸುಮಾರು 55 ವೋಟುಗಳ ಬೆಂಬಲ ಸಿಗಬಹುದು.

- ಜಾಗತಿಕವಾಗಿ ದಕ್ಷಿಣದ ದೇಶಗಳ ನಾಯಕನಾಗಿ ಭಾರತ ಹೊರಹೊಮ್ಮುತ್ತಿದೆ.

Officers Adda



- ಈ ಮೂಲಕ ಭಾರತ ದೇಶ ಜಗತ್ತಿನ ಹಿಂದುಳಿದ ಮತ್ತು ಮುಂದುವರೆಯುತ್ತಿರುವ ದೇಶಗಳ ಗುಂಪಿನ ನಾಯಕನ ಸ್ಥಾನದಲ್ಲಿ ನಿಂತಿದೆ.
- ಆಫ್ರಿಕಾದಲ್ಲಿ ಚೀನಾದ ಹೂಡಿಕೆಯನ್ನು ಮತ್ತು ನಿಯಂತ್ರಣವನ್ನು ತಡೆಯಬಹುದು.
- ಆಫ್ರಿಕಾದ ಎಲ್ಲ ದೇಶಗಳನ್ನು ಒಟ್ಟುಗೂಡಿಸಿದರೆ ಈ ಒಕ್ಕೂಟವು ಜಗತ್ತಿನ 11ನೇ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿದೆ.

Officers Adda



- ಜಾಗತಿಕವಾಗಿ ಪ್ರಮುಖ ಆರ್ಥಿಕ ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ.

- ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೇಶಗಳಲ್ಲಿ ಆರು ದೇಶಗಳು ಆಫ್ರಿಕಾ ಖಂಡದಲ್ಲಿವೆ.


- ಇತ್ತೀಚಿನ ದಿನಗಳಲ್ಲಿ ಬ್ರಿಕ್ಸ್ ನಂತಹ ಸಂಘಟನೆಗಳಲ್ಲಿ ಚೀನಾ ಬೆಂಬಲಿತ ದೇಶಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಭಾರತದಲ್ಲಿ ನಿರ್ಧಾರ ಸರಿಯಾಗಿಯೇ ಇದು.

Officers Adda




INDIA-AFRICA
4th TRADE MINISTERS' MEETING
23rd OCTOBER 2015, NEW DELHI


G20
भारत 2023 INDIA
Officers Adda


INDIA - AFRICA IN NUMBERS
GATEWAY HOUSE
INDIAN COUNCIL ON GLOBAL RELATIONS
India and Africa have a combined population of 2.3 billion
Indian diaspora in Africa consists of nearly 3 million people.
There is a 50,000-strong ethnic African diaspora in India who descended from Bantu peoples of Southeast Africa.
India-Africa bilateral trade is estimated to be around $70 billion
The trade has increased 20 times in the past 15 years.
Nearly 4,500 Indian soldiers are on the ground in Africa under various UN peacekeeping missions.
UN
A fully formed Indian female police unit is also present in Liberia.
India offers 900 scholarships to African students each year.
Indian owned/operated companies are 2nd largest employers in Nigeria.
3% of South African population consists of people of Indian origin.
India is currently spending $7.5 billion on infrastructure projects in over 40 countries.

G20
भारत 2023 INDIA
Officers Adda

- **ಭಾರತ ದೇಶದ ಸಾಧನೆಗಳು**

- ರಷ್ಯಾ ಯುಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಜಗತ್ತು ಭಿನ್ನಾಭಿಪ್ರಾಯ ಹೊಂದಿದೆ ಇಂತಹ ಸಂದರ್ಭದಲ್ಲಿ ಈ ರೀತಿಯ ಶೃಂಗಸಭೆ ನಡೆಸುವುದು ಸವಾಲನ್ನು ಒಡ್ಡುವುದು.

- ಭಾರತ ದೇಶ ಸುಸ್ಥಿರ ಅಭಿವೃದ್ಧಿ ಮತ್ತು ಜಗತ್ತಿನ ಆರ್ಥಿಕ ಅಭಿವೃದ್ಧಿಯ ಕುರಿತು ಮಾತನಾಡಿದೆ.

- ಜಗತ್ತಿನ ಎಲ್ಲ ನಾಯಕರ ಮನವೊಲಿಸುವಲ್ಲಿ ಭಾರತ ದೇಶ ಗೆದ್ದಿದೆ.

Officers Adda



- ಜಾಗತಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಮತ್ತು ಹಿಂದುಳಿದ ದೇಶಗಳ ನಾಯಕನಾಗಿ ಭಾರತ ಹೊರಹೊಮ್ಮಿದೆ.

- ದೆಹಲಿಯ ಘೋಷಣೆಯ ಮೂಲಕ ಒಮ್ಮತವನ್ನು ಮೂಡಿಸುವಲ್ಲಿ ಭಾರತ ದೇಶ ಜಯಶಾಲಿಯಾಗಿದೆ.

- ಒಂದೆಡೆ ಅಮೆರಿಕ ಯುರೋಪ್ ಇನ್ನೊಂದೆಡೆ ರಷ್ಯಾ ಮತ್ತು ಚೀನಾ ದೇಶಗಳನ್ನು ಸರಿದೂಗಿಸುವಲ್ಲಿ ಭಾರತ ಯಶಸ್ವಿಯಾಗಿದೆ.

Officers Adda






G20
भारत 2023 INDIA
Officers Adda

- ಭಾರತ ದೇಶದ ಈ ಸಾಧನೆಯನ್ನು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಹಾಡಿ ಹೋಗಲಿದ್ದಾರೆ.

- ಯುದ್ಧದ ಸಂದರ್ಭದಲ್ಲಿ ಭಾರತ ಒಳ್ಳೆಯ ನಿರ್ಧಾರ ತೆಗೆದುಕೊಂಡಿದೆ.

- ಪರಿಸರದ ವಿಷಯ ಮತ್ತು ಜಾಗತಿಕವಾಗಿ ಹಿಂದುಳಿದ ದೇಶಗಳ ಕುರಿತ ಕಾಳಜಿ ಅತ್ಯಮೂಲ್ಯವಾದದ್ದು.

Officers Adda



- ಜಾಗತಿಕವಾಗಿ ಭಾರತಕ್ಕೆ ಅದ್ಭುತ ಭವಿಷ್ಯವಿದೆ ಎಂದು ಹೇಳಿದ್ದಾರೆ.
- ಜಾಗತಿಕವಾಗಿ ಪರಿಸರಸ್ನೇಹಿ ಇಂಧನಗಳನ್ನು ಪರಿಚಯಿಸುತ್ತಿರುವುದು ನಿಜವಾಗಲೂ ಭಾರತಕ್ಕೆ ಉತ್ತಮ ಅವಕಾಶ ಒದಗಿಸಿಕೊಡುತ್ತದೆ.
- ಭಾರತದಲ್ಲಿ ಕೋಮು ಸೌಹಾರ್ದತೆ ಕಾಪಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ.

Officers Adda



- ಜಗತ್ತಿನ 19 ದೇಶಗಳು ಹಾಗೂ ಐರೋಪ್ಯ ಒಕ್ಕೂಟದ ನಾಯಕರು ಪಾಲ್ಗೊಳ್ಳುವ ಅತಿ ದೊಡ್ಡ ವಾರ್ಷಿಕ ಶೃಂಗಸಭೆ ಜಿ –20 ನ ನವದೆಹಲಿಯಲ್ಲಿ ಸೆಪ್ಟೆಂಬರ್ 9 ಹಾಗೂ 10 ನಡೆಯಲಿದೆ.

- ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ 17ನೇ ಶೃಂಗಸಭೆಯಲ್ಲಿ ಭಾಗವಹಿಸಿದ್ದ ನರೇಂದ್ರ ಮೋದಿ ಅವರು ಮುಂದಿನ ವರ್ಷ ಭಗವಾನ್ ಬುದ್ಧ ಮತ್ತು ಮಹಾತ್ಮ ಗಾಂಧಿಯವರ ಪವಿತ್ರ ಭೂಮಿಯಲ್ಲಿ ಜಿ 20 ನಾಯಕರು ಭೇಟಿಯಾದಾಗ ಜಗತ್ತಿಗೆ ಶಾಂತಿಯ ಬಲವಾದ ಸಂದೇಶ ಸಾರಲು ನಾವೆಲ್ಲರೂ ಕಟಿ ಬದ್ಧರಾಗಿರುತ್ತೇವೆ. ಎಂಬ ವಿಶ್ವಾಸ ಇದೆ. ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದರು.

Officers Adda



- ಈ ಸಲ ಶೃಂಗದ ಘೋಷವಾಕ್ಯ ವಸುದೈವ ಕುಟುಂಬಕಂ ಎಂಬ ಧ್ಯೇಯದ ಅಡಿಯಲ್ಲಿ ಒಂದು ಭೂಮಿ ಒಂದು ಕುಟುಂಬ ಒಂದು ಭವಿಷ್ಯ

Officers Adda



## ಆಹ್ವಾನಿತ ಸಂಘಟನೆಗಳು

- ವಿಶ್ವಸಂಸ್ಥೆ
- ವಿಶ್ವ ಬ್ಯಾಂಕ್
- ಐಎಂಎಫ್
- ವಿಶ್ವ ಆರೋಗ್ಯ ಸಂಸ್ಥೆ
- ಅಂತರಾಷ್ಟ್ರೀಯ ಕಾರ್ಮಿಕ ಸಂಸ್ಥೆ
- ಏಷ್ಯಾ ಅಭಿವೃದ್ಧಿ ಬ್ಯಾಂಕ್
- ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ
- ಆಶಿಯಾನ್
- ಐರೋಪ್ಯ ಕೌನ್ಸಿಲ್
- ಆಫ್ರಿಕಾ ಒಕ್ಕೂಟ
- ಆಫ್ರಿಕನ್ ಯೂನಿಯನ್ ಆಫ್ ಡೆವಲಪ್ಮೆಂಟ್ ಏಜೆನ್ಸಿ

Officers Adda



- ಜಿ 20 ಜಾಗತಿಕ ಜಿಡಿಪಿಯ ಸುಮಾರು ಶೇಕಡಾ 85ರಷ್ಟು ಜಾಗತಿಕ ವ್ಯಾಪಾರದ ಶೇ 75 ಕ್ಕಿಂತ ಹೆಚ್ಚು ಹಾಗೂ ವಿಶ್ವದ ಜನಸಂಖ್ಯೆಯ ಮೂರನೇ ಎರಡರಷ್ಟು ಪ್ರತಿನಿಧಿಸುತ್ತಾರೆ.

- ಭಾರತದ ಆಶಾವಾದ ಜಾಗತಿಕ ಶಾಂತಿ , ಹವಾಮಾನ ಬದಲಾವಣೆ, ಇಂಧನ ಕ್ಷೇತ್ರ ಸೇರಿದಂತೆ ಜಗತ್ತನ್ನು ಕಾಡುವ ವಿಷಯಗಳ ಕುರಿತು ಸದಸ್ಯ ರಾಷ್ಟ್ರಗಳ ನಡುವೆ ಒಮ್ಮತ ಮೂಡಿಸುವ ಆಶಾ ವಾದ.

Officers Adda




















Officers Adda

OFFICERS ADDA

# Communication Crash Course 3.0

# Communication Paper

**ವಿಶೇಷತೆಗಳು**

ಸಾಮಾನ್ಯ ಕನ್ನಡ

ಸಾಮಾನ್ಯ ಇಂಗ್ಲಿಷ್

ಕಂಪ್ಯೂಟರ್ ಜ್ಞಾನ

ಪಿಡಿಎಫ್ ನೋಟ್ಸ್

45 ದಿನಗಳ Crash Course

Helpful for **Group C / CTI / PDO / SDA / FDA**

RECORDED AND LIVE CLASSES WITH MCQ

Last date to join

September 15,2023

**Contact : 8217546761 / 8217583629**

# ಸಾಮಾನ್ಯ ಕನ್ನಡ ವಿಷಯದ ಪಠ್ಯಕ್ರಮ

1. ವರ್ಣಮಾಲೆ, ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರ
2. ಸಂಧಿ ಪ್ರಕರಣ
3. ದೇಶ – ಅನ್ಯದೇಶ್ಯ, ತತ್ಸಮ–ತದ್ಭವ
4. ನಾಮಪದ
5. ಕ್ರಿಯಾಪದ
6. ಸಮಾಸ ಪ್ರಕರಣ
7. ವಾಕ್ಯಗಳು
8. ದ್ವಿರುಕ್ತಿ – ಜೋಡುನುಡಿ
9. ಅನುಕರಣ ವ್ಯಯ
10. ವಿರುಧ್ಧಾರ್ಥಕ ಪದಗಳು, ಸಮಾನಾರ್ಥಕ ಪದಗಳು
9. ಛಂದಸ್ಸು
10. ಅಲಂಕಾರಶಾಸ್ತ್ರ

ಮುಂತಾದವು....


# Syllabus for General English

1.Parts of Speech
a.Nouns
b.Pronouns
c.Adjectives
d.Verbs
e.Adverbs
f.Prepositions
g.Conjunctions
i. Interjections
2.Articles
3.Tenses
4.Sentences and its types

5.Active Voices
6.Question tags
7.Direct and Indirect Speech
8.Degrees of Comparison
9.Figures of Speech
10.Phrases and Idioms
11.Phrasal Verbs
12.One word substitutions
12.Vocabulary
- Antonyms, Synonyms, Prefixes, Suffixes,
Homophones, Homonyms
Etc....

# Syllabus for Computer Literacy

1 Introduction Of Computer
2 CPU And Input Output Devices
3 Computer Memory
4 Hardware And Software
5 Computer Virus And Security
6 Internet, Networking And Data Communication
7 Computer Programming Languages, Logic Gates And Number System
8 Ms Office A) Word B) Powerpoint C) Excell



# LAST DATE TO JOIN

# SEPT 15, 2023

- **MINI ISSUES**

Officers Adda

# NATIONAL ISSUES



# ಸ್ವಚ್ಛ ವಾಯು ಸರ್ವೇಕ್ಷಣ್ 2023




Officers Adda

- ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅವರು ಭೋಪಾಲ್‌ನಲ್ಲಿ ಸ್ವಚ್ಛ ವಾಯು ಸರ್ವೇಕ್ಷಣ್ 2023 (ಸ್ವಚ್ಛ ವಾಯು ಸಮೀಕ್ಷೆ) ಫಲಿತಾಂಶಗಳನ್ನು ಪ್ರಕಟಿಸಿದರು, ಮಧ್ಯಪ್ರದೇಶದ ಇಂದೋರ್, ಮಿಲಿಯನ್‌ಗಿಂತಲೂ ಹೆಚ್ಚು ಜನಸಂಖ್ಯೆಯ ನಗರಗಳಲ್ಲಿ ಅಗ್ರ ಸ್ಥಾನವನ್ನು ಪಡೆದುಕೊಂಡಿದೆ.

- ಸಮೀಕ್ಷೆಯು ತನ್ನ ಎರಡನೇ ವರ್ಷದಲ್ಲಿ ರಾಷ್ಟ್ರೀಯ ಶುದ್ಧ ಗಾಳಿ ಕಾರ್ಯಕ್ರಮದಡಿಯಲ್ಲಿ ಗುರುತಿಸಲಾದ 130 ನಗರಗಳನ್ನು ಒಳಗೊಂಡಿದೆ. ಉತ್ತರ ಪ್ರದೇಶದ ಆಗ್ರಾ ಎರಡನೇ ಸ್ಥಾನದಲ್ಲಿದ್ದರೆ, ಮಹಾರಾಷ್ಟ್ರದ ಥಾಣೆ ಮೂರನೇ ಸ್ಥಾನದಲ್ಲಿದೆ.

Officers Adda

- ಪ್ರಶಸ್ತಿಗಳನ್ನು 2011 ರ ಜನಗಣತಿಯ ಆಧಾರದ ಮೇಲೆ ನಗರದ ಜನಸಂಖ್ಯೆಯ ಗಾತ್ರದಿಂದ ವರ್ಗೀಕರಿಸಲಾಗಿದೆ.

- ಮೂರರಿಂದ ಹತ್ತು ಲಕ್ಷ ಜನಸಂಖ್ಯೆಯ ವಿಭಾಗದಲ್ಲಿ ಮಹಾರಾಷ್ಟ್ರದ ಅಮರಾವತಿ ಅಗ್ರಸ್ಥಾನ ಪಡೆದುಕೊಂಡಿದೆ.

- ಹಿಮಾಚಲ ಪ್ರದೇಶದ ಪಟ್ಟಣಗಳಾದ ಪರ್ವಾನೂ ಮತ್ತು ಕಲಾ ಅಂಬ್ ಮೂರು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರಗಳಲ್ಲಿ ಮುಂಚೂಣಿಯಲ್ಲಿದ್ದು, ಒಡಿಶಾದ ಅಂಗುಲ್ ಮೂರನೇ ಸ್ಥಾನದಲ್ಲಿದೆ.

Officers Adda

- ಸ್ವಚ್ಛ ವಾಯು ಸರ್ವೇಕ್ಷಣ್ ಭಾರತೀಯ ನಗರಗಳಲ್ಲಿ ಗಾಳಿಯ ಗುಣಮಟ್ಟವನ್ನು ನಿರ್ಣಯಿಸಲು ಒಂದು ಉಪಕ್ರಮವಾಗಿದೆ. ಇದು ಶುದ್ಧ ಗಾಳಿಯನ್ನು ಉತ್ತೇಜಿಸುತ್ತದೆ ಮತ್ತು ಸುಧಾರಣೆಗಳನ್ನು ಟ್ರ್ಯಾಕ್ ಮಾಡುತ್ತದೆ.

- ಇಂದೋರ್ ಬಹು ವಾಯು ಮಾಲಿನ್ಯಕಾರಕಗಳನ್ನು ನಿಯಂತ್ರಿಸುವಲ್ಲಿ, ಹೊರಸೂಸುವಿಕೆಯನ್ನು ಕಡಿಮೆ ಮಾಡುವಲ್ಲಿ ಮತ್ತು ಸಾರ್ವಜನಿಕ ಜಾಗೃತಿಯನ್ನು ಹೆಚ್ಚಿಸುವಲ್ಲಿ ಉತ್ತಮವಾಗಿದೆ.

- ನಗರ ಸ್ಥಳೀಯ ಸಂಸ್ಥೆಗಳು ಸ್ವಯಂ-ಮೌಲ್ಯಮಾಪನ ವರದಿಗಳನ್ನು ಸಲ್ಲಿಸುತ್ತವೆ, ವಾಯು ಗುಣಮಟ್ಟ ಮಾನಿಟರಿಂಗ್ ಸಮಿತಿಗಳಿಂದ ಪರಿಶೀಲಿಸಲಾಗುತ್ತದೆ ಮತ್ತು ಶ್ರೇಯಾಂಕಗಳಿಗಾಗಿ CPCB ಯಿಂದ ಮೌಲ್ಯಮಾಪನ ಮಾಡಲಾಗುತ್ತದೆ.

- ಘನತ್ಯಾಜ್ಯ ನಿಯಂತ್ರಣ, ವಾಹನ ಹೊರಸೂಸುವಿಕೆ, ಕೈಗಾರಿಕಾ ಹೊರಸೂಸುವಿಕೆ ಮತ್ತು PM10 ಮಟ್ಟದಲ್ಲಿ ಸುಧಾರಣೆಯಂತಹ ಅಂಶಗಳ ಆಧಾರದ ಮೇಲೆ ನಗರಗಳನ್ನು ಮೌಲ್ಯಮಾಪನ ಮಾಡಲಾಯಿತು.

Officers Adda

# NATIONAL ISSUES



# ಪ್ರಧಾನ ಮಂತ್ರಿ ಉಜ್ವಲ ಯೋಜನೆ (PMUY)

Officers Adda



- ಪ್ರಧಾನ ಮಂತ್ರಿ ಉಜ್ವಲ ಯೋಜನೆ (PMUY), ಗ್ರಾಮೀಣ ಮತ್ತು ವಂಚಿತ ಕುಟುಂಬಗಳಿಗೆ LPG ಗ್ಯಾಸ್ ಸಿಲಿಂಡರ್‌ಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ.

- 9.58 ಕೋಟಿ ಪ್ರಧಾನ ಮಂತ್ರಿ ಉಜ್ವಲ ಯೋಜನೆ ಕುಟುಂಬಗಳಲ್ಲಿ, 1.18 ಕೋಟಿ ಜನರು 2022–23ರಲ್ಲಿ ಯಾವುದೇ ಮರುಪೂರಣವನ್ನು ಖರೀದಿಸಿಲ್ಲ ಮತ್ತು 1.51 ಕೋಟಿ ಜನರು ಒಂದು ಮರುಪೂರಣವನ್ನು ಖರೀದಿಸಿದ್ದಾರೆ.

Officers Adda
Officers Adda

- ಕಡಿಮೆ ಮರುಪೂರಣ ದರಗಳು ಫಲಾನುಭವಿಗಳ ನಡುವೆ ನಿರಂತರ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಯೋಜನೆಯ ಸಾಮರ್ಥ್ಯದ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ.

- 2022–23ರ ಅವಧಿಯಲ್ಲಿ ಸರಾಸರಿ PMUY ಫಲಾನುಭವಿಯು ನಾಲ್ಕಕ್ಕಿಂತ ಕಡಿಮೆ LPG ಸಿಲಿಂಡರ್‌ಗಳನ್ನು ರೀಫಿಲ್ ಮಾಡಿದ್ದಾರೆ ಎಂದು ಡೇಟಾ ಬಹಿರಂಗಪಡಿಸುತ್ತದೆ.

- ನಾಲ್ಕು PMUY ಫಲಾನುಭವಿಗಳಲ್ಲಿ ಒಬ್ಬರು ಯಾವುದೇ LPG ಸಿಲಿಂಡರ್‌ಗಳನ್ನು ಬಳಸಿಲ್ಲ ಅಥವಾ 2022–2023ರಲ್ಲಿ ಕೇವಲ ಒಂದು ರೀಫಿಲ್ ಅನ್ನು ತೆಗೆದುಕೊಂಡಿದ್ದಾರೆ.

Officers Adda

- ಇದಕ್ಕೆ ವ್ಯತಿರಿಕ್ತವಾಗಿ, PMUY ಅಲ್ಲದ ಕುಟುಂಬಗಳು ಗಮನಾರ್ಹವಾಗಿ ಹೆಚ್ಚು ಸಿಲಿಂಡರ್ ಮರುಪೂರಣಗಳನ್ನು ಬಳಸುತ್ತವೆ.

- ಜನವರಿ 2018 ಮತ್ತು ಮಾರ್ಚ್ 2023 ರ ನಡುವೆ, ಸಬ್ಸಿಡಿ ಹೊಂದಿರುವ LPG ಸಿಲಿಂಡರ್‌ಗಳ ದರಗಳು 82% ರಷ್ಟು ಹೆಚ್ಚಾಗಿದೆ, ಜನವರಿ 2018 ರಲ್ಲಿ ₹495.64 ರಿಂದ ಮಾರ್ಚ್ 2023 ರಲ್ಲಿ ₹903 ಕ್ಕೆ ತಲುಪಿದೆ.

- ಸಬ್ಸಿಡಿ ಮೊತ್ತವು ಚಿಲ್ಲರೆ ಮಾರಾಟದ ಬೆಲೆ ಮತ್ತು ಸರ್ಕಾರವು ನಿಗದಿಪಡಿಸಿದ ಸಬ್ಸಿಡಿ ವೆಚ್ಚದ ನಡುವಿನ ವ್ಯತ್ಯಾಸವನ್ನು ಅವಲಂಬಿಸಿರುತ್ತದೆ.

- ಸಬ್ಸಿಡಿ ರಹಿತ LPG ಸಿಲಿಂಡರ್‌ಗಳ ಬೆಲೆ 49% ಹೆಚ್ಚಳವಾಗಿದ್ದು, ಮಾರ್ಚ್ 2023 ರಲ್ಲಿ ₹1,103 ತಲುಪಿದೆ.

Officers Adda

- **ಪ್ರಧಾನ ಮಂತ್ರಿ ಉಜ್ವಲ ಯೋಜನೆ (PMUY):-**

- ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ (MOPNG), 'ಪ್ರಧಾನ ಮಂತ್ರಿ ಉಜ್ವಲ ಯೋಜನೆ' (PMUY) ಅನ್ನು ಪ್ರಮುಖ ಯೋಜನೆಯಾಗಿ ಪರಿಚಯಿಸಿತು.

- ಸಾಂಪ್ರದಾಯಿಕ ಅಡುಗೆ ಇಂಧನಗಳ ಬಳಕೆಯು ಗ್ರಾಮೀಣ ಮಹಿಳೆಯರ ಆರೋಗ್ಯದ ಮೇಲೆ ಹಾಗೂ ಪರಿಸರದ ಮೇಲೆ ದುಷ್ಪರಿಣಾಮ ಬೀರಿದೆ.

- ಈ ಸಮಸ್ಯೆಯನ್ನು ಪರಿಹರಿಸಲು ಪ್ರಧಾನಮಂತ್ರಿ ಉಜ್ವಲ ಯೋಜನೆ ಜಾರಿಗೊಳಿಸಲಾಯಿತು.

Officers Adda

- **ಉದ್ದೇಶಗಳು:**
- 1.ಮಹಿಳೆಯರನ್ನು **ಸಬಲೀಕರಣಗೊಳಿಸುವುದು** ಮತ್ತು ಅವರ ಆರೋಗ್ಯವನ್ನು ರಕ್ಷಿಸುವುದು.
- **2.ಅಶುದ್ಧ ಅಡುಗೆ ಇಂಧನದಿಂದ** ಭಾರತದಲ್ಲಿ ಸಾವಿನ ಸಂಖ್ಯೆಯನ್ನು ಕಡಿಮೆ ಮಾಡುವುದು.
- 3.ವಾಯು ಮಾಲಿನ್ಯದಿಂದ ಉಂಟಾಗುವ ಗಮನಾರ್ಹ ಸಂಖ್ಯೆಯ **ತೀವ್ರವಾದ ಉಸಿರಾಟದ ಕಾಯಿಲೆಗಳಿಂದ ಚಿಕ್ಕ ಮಕ್ಕಳನ್ನು ತಡೆಗಟ್ಟುವುದು.**

OfficersAdda

- **ವೈಶಿಷ್ಟ್ಯಗಳು:**

- ಈ ಯೋಜನೆಯು BPL ಕುಟುಂಬಗಳಿಗೆ ಪ್ರತಿ LPG ಸಂಪರ್ಕಕ್ಕೆ 1600 ರೂಪಾಯಿಗಳ ಆರ್ಥಿಕ ಬೆಂಬಲವನ್ನು ಒದಗಿಸುತ್ತದೆ.

- ಠೇವಣಿ–ಮುಕ್ತ LPG ಸಂಪರ್ಕದ ಜೊತೆಗೆ, ಉಜ್ವಲ 2.0 ಫಲಾನುಭವಿಗಳಿಗೆ ಮೊದಲ ಮರುಪೂರಣ ಮತ್ತು ಹಾಟ್‌ಪ್ಲೇಟ್ ಅನ್ನು ಉಚಿತವಾಗಿ ಒದಗಿಸುತ್ತದೆ.




Officers Adda

OFFICERS ADDA

# DRUSHTI 3.0

SPECIAL COURSE FOR 2 YEARS CURRENT AFFAIRS

(2022 & 2023)

SUBJECT WISE CURRENT AFFAIRS VIDEOS

2000+ VIDEOS

MONTHLY AND YEARLY SUBJECT WISE PDF


WEEKLY TEST ON DAILY CURRENT AFFAIRS

LAST DATE TO JOIN

SEPT 10,2023

CONTACT

8217546761 / 8217583629




Officers Adda

- # MICRO ISSUES

ISSUES BASED COLOURS

Officers Adda

# Minute man 3 ICBM Test

- ಯುಎಸ್ ಏರ್ ಫೋರ್ಸ್ ಇತ್ತೀಚೆಗೆ ಕ್ಯಾಲಿಫೋರ್ನಿಯಾದ ವಾಂಡೆನ್‌ಬರ್ಗ್ ಏರ್ ಫೋರ್ಸ್ ಬೇಸ್‌ನಿಂದ ನಿರಾಯುಧ ಮಿನಿಟ್‌ಮ್ಯಾನ್ 3 ಖಂಡಾಂತರ ಕ್ಷಿಪಣಿಯ (ICBM) ಯಶಸ್ವಿ ಪರೀಕ್ಷೆಯನ್ನು ನಡೆಸಿತು.

- ಮಿನಿಟ್‌ಮ್ಯಾನ್ 3 ICBM ಪರೀಕ್ಷೆಯು US ಪರಮಾಣು ನಿರೋಧಕದ ಕಾರ್ಯಾಚರಣೆಯ ಸಿದ್ಧತೆಯನ್ನು ಮೌಲ್ಯೀಕರಿಸುತ್ತದೆ

Officers Adda

- ಉತ್ತರ ಕೊರಿಯಾದ ಪರಮಾಣು ಕಾರ್ಯಕ್ರಮಗಳನ್ನು ಪರಿಹರಿಸಲು ಯುಎಸ್ ಮಾತುಕತೆಗಳಲ್ಲಿ ತೊಡಗಿದೆ, ಅಂತರರಾಷ್ಟ್ರೀಯ ನಿರ್ಬಂಧಗಳನ್ನು ಮತ್ತು ಮಿಲಿಟರಿ ಸ್ವತ್ತುಗಳನ್ನು ನಿಯೋಜಿಸಿದೆ.

- ಪರಮಾಣು ಸಂಘರ್ಷದ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ.

Officers Adda

# ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ 2023

- 2023 ರ ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಯನ್ನು ಪಡೆದ ಮಧ್ಯಪ್ರದೇಶದ ಏಕಲವ್ಯ ಮಾಡೆಲ್ ರೆಸಿಡೆನ್ಶಿಯಲ್ ಸ್ಕೂಲ್ (EMRS) ಭೋಪಾಲ್‌ನ ಪ್ರಾಂಶುಪಾಲರಾದ ಡಾ. ಯಶಪಾಲ್ ಸಿಂಗ್ ಅವರನ್ನು ಬುಡಕಟ್ಟು ವ್ಯವಹಾರಗಳ ಕೇಂದ್ರ ಸಚಿವರು ಸನ್ಮಾನಿಸಿದರು .

- 1997–98 ರಲ್ಲಿ ಪ್ರಾರಂಭವಾದ EMRS ಯೋಜನೆಯು ದೂರದ ಮೂಲೆಗಳಲ್ಲಿ VI ರಿಂದ XII ತರಗತಿಯವರೆಗಿನ ಪರಿಶಿಷ್ಟ ಪಂಗಡದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡುವ ವಸತಿ ಶಾಲೆಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ .

Officers Adda

- ಈ ಯೋಜನೆಯನ್ನು ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಅನುಷ್ಠಾನಗೊಳಿಸುತ್ತಿದೆ .
- ಇತ್ತೀಚೆಗೆ, ಬುಡಕಟ್ಟು ವ್ಯವಹಾರಗಳ ಸಚಿವಾಲಯವು ಮಹಾರಾಷ್ಟ್ರದ ನಾಸಿಕ್‌ನಲ್ಲಿ ಏಕಲವ್ಯ ಮಾದರಿ ವಸತಿ ಶಾಲೆ (ಇಎಂಆರ್‌ಎಸ್) ನಿರ್ಮಾಣಕ್ಕೆ ಅಡಿಗಲ್ಲು ಹಾಕಿದೆ.
- EMRS ಭಾರತದಾದ್ಯಂತ ಭಾರತೀಯ ಬುಡಕಟ್ಟುಗಳಿಗೆ (ST– ಪರಿಶಿಷ್ಟ ಪಂಗಡಗಳು) ಮಾದರಿ ವಸತಿ ಶಾಲೆಗಳನ್ನು ಮಾಡುವ ಯೋಜನೆಯಾಗಿದೆ. ಇದು 1997–98 ರಲ್ಲಿ ಪ್ರಾರಂಭವಾಯಿತು.

Officers Adda

## ಜಾರ್ಖಂಡ್ ಟ್ರಾನ್ಸ್‌ಜೆಂಡರ್ ಸಮುದಾಯವನ್ನು ಸಾರ್ವತ್ರಿಕ ಪಿಂಚಣಿ ಯೋಜನೆಗೆ ಸಂಯೋಜಿಸುತ್ತದೆ.

- ಜಾರ್ಖಂಡ್ ಟ್ರಾನ್ಸ್‌ಜೆಂಡರ್ ಸಮುದಾಯವನ್ನು ಸಾರ್ವತ್ರಿಕ ಪಿಂಚಣಿ ಯೋಜನೆಗೆ ಒಳಗೊಳ್ಳಲು ವಿಸ್ತರಿಸಿದೆ.

- ಹೊಸದಾಗಿ ಜಾರಿಗೆ ತಂದಿರುವ ಮುಖ್ಯಮಂತ್ರಿ ರಾಜ್ಯ ಸಮಾಜಿಕ ಸುರಕ್ಷಾ ಪಿಂಚಣಿ ಯೋಜನೆ ಅಡಿಯಲ್ಲಿ, ಅರ್ಹ ತೃತೀಯಲಿಂಗಿ ಫಲಾನುಭವಿಗಳು ಮಾಸಿಕ ಆರ್ಥಿಕ ಸಹಾಯಕ್ಕೆ ಅರ್ಹರಾಗಿರುತ್ತಾರೆ.

Officers Adda

- ಈ ಪರಿವರ್ತಕ ಉಪಕ್ರಮವು ಕೇವಲ ಹಣಕಾಸಿನ ನೆರವು ನೀಡುವುದಲ್ಲದೆ ಟ್ರಾನ್ಸ್‌ಜೆಂಡರ್ ಸಮುದಾಯಕ್ಕೆ ಏಕೀಕರಣ ಮತ್ತು ಸಾಮಾಜಿಕ ಭದ್ರತೆಗೆ ಒತ್ತು ನೀಡುತ್ತದೆ.

- ಪಿಂಚಣಿ ಯೋಜನೆಗೆ ಅರ್ಹರಾಗಲು, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ನಿರ್ದಿಷ್ಟ ಮಾನದಂಡಗಳನ್ನು ಪೂರೈಸಬೇಕು. ಅವರು 18 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನವರಾಗಿರಬೇಕು.

- ಯಾವುದೇ ಜಾತಿ ಮೀಸಲಾತಿ ವರ್ಗದ ಅಡಿಯಲ್ಲಿ ಬರದ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ಹಿಂದುಳಿದ ವರ್ಗ–2 ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯುತ್ತಾರೆ.

Officers Adda

# IMPORTANT NEWS PAPER CUTTINGS

## INPC

# 90 ಡಾಲರ್ ಸನಿಹಕ್ಕೆ ಕಚ್ಚಾ ತೈಲ

ನವದೆಹಲಿ (ಪಿಟಿಐ): ಕಚ್ಚಾ ತೈಲ ಉತ್ಪಾದನೆ ಹಾಗೂ ರಫ್ತು ಕಡಿತವನ್ನು ಈ ವರ್ಷದ ಅಂತ್ಯದವರೆಗೆ ಮುಂದುವರಿಸಲು ರಷ್ಯಾ ಮತ್ತು ಸೌದಿ ಅರೇಬಿಯಾ ತೀರ್ಮಾನಿಸಿರುವ ಪರಿಣಾಮವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರೆಲ್‌ಗೆ 90 ಡಾಲರ್ ಸನಿಹಕ್ಕೆ ಬಂದಿದೆ.

ಇದು 10 ತಿಂಗಳ ಗರಿಷ್ಠ ಮಟ್ಟ. ಈ ಬೆಲೆ ಏರಿಕೆಯ ಕಾರಣದಿಂದಾಗಿ ಭಾರತವು ಕಚ್ಚಾ ತೈಲ ಆಮದಿಗೆ ಹೆಚ್ಚು ಹಣ ವ್ಯಯಿಸಬೇಕಾಗಿದೆ.

11



- **90 ಡಾಲರ್ ಸನಿಹಕ್ಕೆ ಕಚ್ಚಾ ತೈಲ**

- ಕಚ್ಚಾತೈಲ ಉತ್ಪಾದನೆ ಹಾಗೂ ರಫ್ತು ಕಡಿತವನ್ನು ಈ ವರ್ಷದ ಅಂತ್ಯದವರೆಗೆ ಮುಂದುವರಿಸಲು ರಷ್ಯಾ ಮತ್ತು ಸೌದಿ ಅರೇಬಿಯಾ ತೀರ್ಮಾನಿಸಿರುವ ಪರಿಣಾಮವಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಬ್ಯಾರಲ್ ಗೆ 90 ಡಾಲರ್ ಸನಿಹಕ್ಕೆ ಬಂದಿದೆ.

- ಇದು 10 ತಿಂಗಳ ಗರಿಷ್ಠ ಮಟ್ಟ ಈ ಬೆಲೆ ಏರಿಕೆಯ ಕಾರಣದಿಂದಾಗಿ ಭಾರತವು ಕಚ್ಚಾ ತೈಲ ಆಮದಿಗೆ ಹೆಚ್ಚು ಹಣ ವಹಿಸಬೇಕಾಗಿದೆ .

Officers Adda





ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ 'ಸುಪ್ರೀಂ'

# 2 ವರ್ಷ ವಿರಾಮ ಅವಧಿ ನಿಗದಿಗೆ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಮೂರ್ತಿಗಳು ನಿವೃತ್ತಿಯಾದ ತಕ್ಷಣವೇ ಸರ್ಕಾರಿ ಹುದ್ದೆ ಒಪ್ಪಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳ ವಿರಾಮ ಅವಧಿಯನ್ನು (ಕೂಲಿಂಗ್ ಆಫ್ ಪೀರಿಯಡ್) ನಿಗದಿಪಡಿಸುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್‌ ಬುಧವಾರ ವಜಾಗೊಳಿಸಿದೆ.

ಬಾಂಬೆ ವಕೀಲರ ಸಂಘವು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕಿಶನ್ ಕೌಲ್ ಹಾಗೂ ಸುಧಾಂಶು ಧೂಲಿಯಾ ಅವರಿದ್ದ ವಿಭಾಗೀಯ ನ್ಯಾಯಪೀಠವು, 'ಅಂತಹ ಹುದ್ದೆ ಒಪ್ಪಿಕೊಳ್ಳುವುದು ಸಂಬಂಧಪಟ್ಟ ನ್ಯಾಯಮೂರ್ತಿಗಳ ವಿವೇಚನೆಗೆ ಬಿಟ್ಟಿದ್ದೆ' ಎಂದು ಅಭಿಪ್ರಾಯಪಟ್ಟಿತು.

ನ್ಯಾಯಾಂಗದಲ್ಲಿ ಹಲವು ವರ್ಷಗಳ ಕಾಲ ನ್ಯಾಯಮೂರ್ತಿಗಳು ಸೇವೆ ಸಲ್ಲಿಸಿರುತ್ತಾರೆ. ನಿವೃತ್ತಿ ಬಳಿಕ ಸರ್ಕಾರಿ ಹುದ್ದೆ ಒಪ್ಪಿಕೊಂಡರೆ ಅವರ ನ್ಯಾಯಿಕ ಅಧಿಕಾರಾವಧಿಯಲ್ಲಿ ಸರ್ಕಾರದ ಪಕ್ಷಪಾತಿಯಾಗಿದ್ದರು ಎಂಬ ತಪ್ಪುಕಲ್ಪನೆ ಜನರಲ್ಲಿ ಮೂಡುತ್ತದೆ ಎಂದು ಅರ್ಜಿದಾರರ ಪರ ವಕೀಲ ಅಹ್ಮದ್ ಮೆಹದಿ ಅಬ್ದಿ ಅವರು ಮಂಡಿಸಿದ ವಾದವನ್ನು ನ್ಯಾಯಪೀಠವು ತಿರಸ್ಕರಿಸಿತು.

'ಶಾಸನಬದ್ಧ ಹುದ್ದೆಗಳಿಗೆ ನ್ಯಾಯ ಮೂರ್ತಿಗಳನ್ನು ನೇಮಕ ಮಾಡುವುದನ್ನು ಪ್ರಶ್ನಿಸುವುದಿ ದ್ದರೆ ಆಡಳಿತಾತ್ಮಕ ನ್ಯಾಯಮಂಡಳಿಗಳ ಮೊರೆ ಹೋಗಬಹುದು' ಎಂದು ಸೂಚಿಸಿತು.

ಇದಕ್ಕೆ ಪ್ರತಿಕ್ರಿಯಿಸಿದ ವಕೀಲ ಅಬ್ದಿ, 'ಈ ಅರ್ಜಿಯು ಸರ್ಕಾರದ ವಿವೇಚನೆಯಡಿ ನೇಮಿಸುವ ರಾಜಕೀಯ ಹುದ್ದೆಗಳಿಗೆ ಸಂಬಂಧಿಸಿದ್ದಾಗಿದೆ' ಎಂದು ಗಮನ ಸೆಳೆದರು.

ಆಗ ನ್ಯಾಯಪೀಠವು, 'ನಿವೃತ್ತ ನ್ಯಾಯಮೂರ್ತಿಗಳು ಯಾವ ಹುದ್ದೆ ಒಪ್ಪಿಕೊಳ್ಳಬೇಕು ಎಂಬುದನ್ನು ಅವರ ವಿವೇಚನೆಗೆ ಬಿಡುವುದು ಒಳಿತು. ಈ ವಿಷಯಕ್ಕೆ ಸಂಬಂಧಿಸಿ ಕಾನೂನು ರೂಪಿಸುವ ಅಗತ್ಯವಿದ್ದರೂ, ಸಂವಿಧಾನದ 32ನೇ ವಿಧಿಯಡಿ ನ್ಯಾಯಾಲಯವು ನಿರ್ದೇಶನ ನೀಡಲು ಸಾಧ್ಯವಿಲ್ಲ' ಎಂದಿತು.

ವಿಚಾರಣೆ ವೇಳೆ ಅಬ್ದಿ ಅವರು, ವಿರಾಮ ಅವಧಿ ಇಲ್ಲದ್ದರಿಂದ ಸುಪ್ರೀಂ ಕೋರ್ಟ್‌ ನ್ಯಾಯಮೂರ್ತಿಯಾಗಿ ನಿವೃತ್ತಿಯಾದ ತಕ್ಷಣವೇ ಎಸ್. ಅಬ್ದುಲ್ ನಜೀರ್ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ಸರ್ಕಾರ ನೇಮಿಸಿದ್ದನ್ನು ಉಲ್ಲೇಖಿಸಿದರು. ಇದಕ್ಕೆ ನ್ಯಾಯಪೀಠವು ಆಕ್ಷೇಪ ವ್ಯಕ್ತಪಡಿಸಿತು.

## ಅರ್ಜಿದಾರರ ವಾದ ಏನು?

ಸುಪ್ರೀಂ ಕೋರ್ಟ್‌ ಹಾಗೂ ಹೈಕೋರ್ಟ್‌ ನ್ಯಾಯಮೂರ್ತಿಗಳು ನಿವೃತ್ತಿಯಾದ ತಕ್ಷಣವೇ ಯಾವುದೇ ವಿರಾಮ ಅವಧಿ ಇಲ್ಲದೆಯೇ ಸರ್ಕಾರಿ ಹುದ್ದೆಗಳನ್ನು ಒಪ್ಪಿಕೊಳ್ಳಬಾರದು. ಒಂದು ವೇಳೆ ಒಪ್ಪಿಕೊಂಡರೆ ನ್ಯಾಯಾಂಗ ವ್ಯವಸ್ಥೆ ಕುರಿತು ಜನರಲ್ಲಿ ತಪ್ಪುಭಾವನೆ ಮೂಡುತ್ತದೆ ಎಂಬುದು ಅರ್ಜಿದಾರರ ವಾದ.

2013ರಲ್ಲಿ ಬಿಸಿಸಿಐ ಸುಧಾರಣೆಗೆ ಸುಪ್ರೀಂ ಕೋರ್ಟ್‌ ನೇಮಿಸಿದ್ದ ನಿವೃತ್ತ ಸಿಜೆಐ ಆರ್‌.ಎಂ. ಲೋಧಾ ನೇತೃತ್ವದ ಸಮಿತಿಯು ವಿರಾಮ ಅವಧಿಗೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿದೆ. ಅದನ್ನು ಸರ್ಕಾರಿ ಹುದ್ದೆಗಳಿಗೆ ನ್ಯಾಯಮೂರ್ತಿಗಳನ್ನು ನೇಮಿಸುವಾಗಲೂ ಅನುಸರಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಅಯೋಧ್ಯೆ ಪ್ರಕರಣದ ತೀರ್ಪು ನೀಡಿದ ಸಾಂವಿಧಾನಿಕ ಪೀಠದಲ್ಲಿದ್ದ ನ್ಯಾಯಮೂರ್ತಿಗಳ ಪೈಕಿ ನಜೀರ್ ಕೂಡ ಒಬ್ಬರಾಗಿದ್ದರು. ಅವರು ನಿವೃತ್ತಿಯಾದ ತಕ್ಷಣವೇ ರಾಜ್ಯಪಾಲರ ಹುದ್ದೆಗೆ ನೇಮಿಸಿದ ನಿದರ್ಶನವನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ರಾಜಕೀಯವಾಗಿ ಅತ್ಯಂತ ಸೂಕ್ಷ್ಮ ಪ್ರಕರಣಗಳಾದ ಅಸ್ಸಾಂ ಎನ್‌ಆರ್‌ಸಿ, ಶಬರಿಮಲೆ, ಅಯೋಧ್ಯೆ, ರಫೇಲ್ ವಿವಾದದ ವಿಚಾರಣೆಯನ್ನು ಸಿಜೆಐ ಆಗಿದ್ದ ರಂಜನ್ ಗೊಗೊಯ್ ನಡೆಸಿದ್ದಾರೆ. ನಿವೃತ್ತಿಯಾದ ಬಳಿಕವೇ ರಾಜ್ಯಸಭೆಗೆ ಅವರನ್ನು ನಾಮಕರಣ ಮಾಡಲಾಗಿದೆ ಎಂದು ಹೇಳಲಾಗಿದೆ.

ಅಯೋಧ್ಯೆ ಪ್ರಕರಣದ ಸಂವಿಧಾನಿಕ ಪೀಠದಲ್ಲಿದ್ದ ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರನ್ನು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿರುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಸುಪ್ರೀಂ ಕೋರ್ಟ್

## 'ದಾನಿಗಳ ರಕ್ತವು ಶುದ್ಧವಾಗಿರಬೇಕು'

ನವದೆಹಲಿ (ಪಿಟಿಐ): 'ದಾನಿಗಳಿಂದ ತಮಗೆ ವರ್ಗಾವಣೆಯಾಗುತ್ತಿರುವ ರಕ್ತವು ಶುದ್ಧವಾಗಿದೆ ಎಂಬುದು ಸ್ವೀಕರಿಸುವವರಿಗೆ ಖಚಿತವಾಗಿ ತಿಳಿದಿರಬೇಕು' ಎಂದು ಸುಪ್ರೀಂ ಕೋರ್ಟ್‌ ಬುಧವಾರ ಹೇಳಿದೆ.

ಲಿಂಗತ್ವ ಅಲ್ಪಸಂಖ್ಯಾತರು, 'ಗೇ' (ಪುರುಷ-ಪುರುಷನ ನಡುವಿನ ಲೈಂಗಿಕ ಸಂಬಂಧ ಹೊಂದಿರುವವರು) ಹಾಗೂ ಲೈಂಗಿಕ ಕಾರ್ಯಕರ್ತೆಯರನ್ನು ರಕ್ತದಾನದಿಂದ ಹೊರಗಿಟ್ಟಿರುವ ಮಾರ್ಗಸೂಚಿ 2017 ಅನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್‌ ಈ ರೀತಿ ತಾಕೀತು ಮಾಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧೂಲಿಯಾ ಅವರನ್ನೊಳಗೊಂಡ ನ್ಯಾಯಪೀಠವು, ಅರ್ಜಿಗೆ ಸಂಬಂಧಿಸಿದಂತೆ ನೋಟಿಸ್ ನೀಡುತ್ತಿಲ್ಲ. ಇದೇ ವಿಷಯವನ್ನು ಪ್ರಸ್ತಾಪಿಸುವ ಮತ್ತೊಂದು ಬಾಕಿ ಉಳಿದಿರುವ ಅರ್ಜಿಯೊಂದಿಗೆ ಸೇರಿಸಲಾಗುವುದು ಎಂದು ಹೇಳಿದೆ.

ಬುಧವಾರದ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ, ಮಹಾರಾಷ್ಟ್ರ ಮೂಲದ ಅರ್ಜಿದಾರರ ಪರ ವಕೀಲರು, ಕೆಲವು ವರ್ಗದ ಜನರು ರಕ್ತದಾನ ಮಾಡುವುದನ್ನು ಹೊರತುಪಡಿಸಿದ ಮಾರ್ಗಸೂಚಿಗಳು ಅವರ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

'ದಾನಿಗಳಿಂದ ತಮಗೆ ವರ್ಗಾವಣೆಯಾಗುತ್ತಿರುವ ರಕ್ತವು ಶುದ್ಧವಾಗಿದೆ ಎಂಬುದು ಸ್ವೀಕರಿಸುವವರು ಖಚಿತಪಡಿಸಿಕೊಳ್ಳಬೇಕು' ಎಂಬುದನ್ನು ನ್ಯಾಯಪೀಠವು ಗಮನಿಸಿತು.

## ಎಡಿಟರ್ಸ್ ಗಿಲ್ಡ್‌ನ ನಾಲ್ವರು ಸದಸ್ಯರಿಗೆ 11ರ ವರೆಗೆ 'ಸುಪ್ರೀಂ' ರಕ್ಷಣೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿನ ಹಿಂಸಾಚಾರ ಕುರಿತು ಪ್ರಕಟಿಸಿರುವ ವರದಿಗೆ ಸಂಬಂಧಿಸಿ ಎಡಿಟರ್ಸ್ ಗಿಲ್ಡ್‌ನ (ಇಜಿಐ) ನಾಲ್ವರ ಸದಸ್ಯರ ವಿರುದ್ಧ ದಾಖಲಾಗಿರುವ ಎರಡು ಎಫ್‌ಐಆರ್‌ಗಳ ಅನ್ವಯ ಅವರ ವಿರುದ್ಧ ಸೆ.11ರ ವರೆಗೆ ಯಾವುದೇ ಬಲವಂತದ ಕ್ರಮ ತೆಗೆದುಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್‌ ಬುಧವಾರ ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ, ಈ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಮಣಿಪುರ ಸರ್ಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಸೆ.11ಕ್ಕೆ ಮುಂದೂಡಿತು.

ರಾಜ್ಯದಲ್ಲಿ ಭುಗಿಲೆದ್ದಿದ್ದ ಹಿಂಸಾಚಾರದ ಹಿನ್ನೆಲೆಯಲ್ಲಿ ಗಿಲ್ಡ್‌ನ ನಾಲ್ವರ ಸದಸ್ಯರಿದ್ದ ಸತ್ಯಶೋಧನಾ ತಂಡ ಇತ್ತೀಚೆಗೆ ಮಣಿಪುರಕ್ಕೆ ಭೇಟಿ ನೀಡಿ, ವರದಿ ಪ್ರಕಟಿಸಿತ್ತು. ರಾಜ್ಯದಲ್ಲಿ ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಿದ್ದು ಮಾಧ್ಯಮಗಳ ಕಾರ್ಯ ನಿರ್ವಹಣೆಗೆ ತೊಂದರೆಯಾಗಿತ್ತು ಎಂದು ವರದಿಯಲ್ಲಿ ಹೇಳಲಾಗಿತ್ತು.

'ಕೂಟ ಪ್ರಕಟಿಸಿದ್ದ ವರದಿ ಪ್ರಚೋದನಕಾರಿಯಾಗಿದೆ' ಎಂದು ಆರೋಪಿಸಿದ್ದ ರಾಜ್ಯ ಸರ್ಕಾರ, ಈ ಸಂಬಂಧ ಗಿಲ್ಡ್ ಅಧ್ಯಕ್ಷೆ ಸೀಮಾ ಮುಸ್ತಾಫ, ಸದಸ್ಯರಾದ ಸೀಮಾ ಗುಹಾ, ಭರತ್ ಭೂಷಣ್ ಹಾಗೂ ಸಂಜಯ್ ಕಪೂರ್ ವಿರುದ್ಧ ಎಫ್‌ಐಆರ್‌ಗಳನ್ನು ದಾಖಲಿಸಿತ್ತು.



- ಎರಡು ವರ್ಷ ವಿರಾಮ ಅವಧಿ ನಿಗದಿಗೆ ನಕಾರ

- ನ್ಯಾಯಮೂರ್ತಿಗಳು ನಿವೃತ್ತಿಯಾದ ತಕ್ಷಣವೇ ಸರ್ಕಾರಿ ಹುದ್ದೆ ಒಪ್ಪಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಎರಡು ವರ್ಷಗಳ ವಿರಾಮ ಅವಧಿಯನ್ನು ಕೂಲಿಂಗ್ ಆಫ್ ಪಿರಿಯಡ್ ನಿಗದಿಪಡಿಸುವಂತೆ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪಿ ಐ ಎಲ್ ಸುಪ್ರೀಂ ಕೋರ್ಟ್ ವಜಾ ಗೊಳಿಸಿದೆ.

- ಅಂತಹ ಹುದ್ದೆ ಒಪ್ಪಿಕೊಳ್ಳುವುದು ಸಂಬಂಧಪಟ್ಟ ನ್ಯಾಯಮೂರ್ತಿಗಳ ವಿವೇಚನೆಗೆಬಿಟ್ಟಿದೆ ಎಂದು ಅಭಿಪ್ರಾಯ ಪಟ್ಟಿತು.

Officers Adda



- ನ್ಯಾಯಾಂಗದಲ್ಲಿ ಹಲವು ವರ್ಷಗಳ ಕಾಲ ನ್ಯಾಯಮೂರ್ತಿಗಳು ಸೇವೆ ಸಲ್ಲಿಸಿರುತ್ತಾರೆ **ನಿವೃತ್ತಿ ಬಳಿಕ ಸರ್ಕಾರಿ ಹುದ್ದೆ ಒಪ್ಪಿಕೊಂಡರೆ ಅವರ ನ್ಯಾಯಿಕ ಅಧಿಕಾರ ಅವಧಿಯಲ್ಲಿ ಸರ್ಕಾರದ ಪಕ್ಷಪಾತೀಯಾಗಿದ್ದರು** ಎಂಬ ತಪ್ಪು ಕಲ್ಪನೆ ಜನರಲ್ಲಿ ಮೂಡುತ್ತದೆ. ಎಂದು ಅರ್ಜಿದಾರರ ಪರ ವಕೀಲ ಅಹಮದ್ ಮೆಹದಿ ಅಬ್ದಿ ಅವರು ಮಂಡಿಸಿದ ವಾದವನ್ನು ನ್ಯಾಯಪೀಠವು ತಿರಸ್ಕರಿಸಿತು.

ಆಯೋಧ್ಯೆ ಪ್ರಕರಣದ ತೀರ್ಪು ನೀಡಿದ ಸಂವಿಧಾನಿಕ ಪೀಠದಲ್ಲಿದ್ದ ನ್ಯಾಯಮೂರ್ತಿಗಳ ಪೈಕಿ ನಜೀರ್ ಕೂಡ ಒಬ್ಬರಾಗಿದ್ದರು

Officers Adda



- ಅವರು ನಿವೃತ್ತಿಯಾದ ತಕ್ಷಣವೇ ರಾಜ್ಯಪಾಲರ ಹುದ್ದೆಗೆ ನೇಮಿಸಿದ ನಿದರ್ಶನವನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

- ರಾಜಕೀಯವಾಗಿ ಅತ್ಯಂತ ಸೂಕ್ಷ್ಮಪ್ರಕರಣಗಳಾದ ಅಸ್ಸಾಂ ಎನ್ ಆರ್ ಸಿ , ಶಬರಿಮಲೆ , ಅಯೋಧ್ಯೆ ರಫೇಲ್ ವಿವಾದದ ವಿಚಾರಣೆಯನ್ನು ಸಿಜೆಐ ಆಗಿದ್ದ ರಂಜನ್ ಗೊಗ ಯ ನಡೆಸಿದ್ದಾರೆ. ನಿವೃತ್ತಿಯಾದ ಬಳಿಕವೇ ರಾಜ್ಯಸಭೆಗೆ ಅವರನ್ನುನಾಮಕರಣ ಮಾಡಲಾಗಿದೆ ಎಂದು ಹೇಳಲಾಗಿದೆ.

- ಅಯೋಧ್ಯೆ ಪ್ರಕರಣದ ಸಂವಿಧಾನಿಕ ಪೀಠದಲ್ಲಿದ್ದ ನ್ಯಾಯಮೂರ್ತಿ ಅಶೋಕ ಭೂಷಣ್ ಅವರನ್ನು ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಿರುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

Officers Adda



# ಸ್ಮಾರಕ ರಕ್ಷಣೆಗೆ ಆ್ಯಪ್ ಬಿಡುಗಡೆ

ನವದೆಹಲಿ (ಪಿಟಿಐ): ಸ್ಮಾರಕಗಳ ರಕ್ಷಣೆಗಾಗಿ ಕಾರ್ಪೊರೇಟ್ ಭಾಗಿದಾರರ ಸಹಭಾಗಿತ್ವ ಪಡೆಯುವ ಉದ್ದೇಶದಿಂದ ಭಾರತೀಯ ಪುರಾತತ್ವ ಇಲಾಖೆಯು (ಎಎಸ್ಐ) ಸೋಮವಾರ 'ಅಡಾಪ್ಟ್ ಎ ಹೆರಿಟೇಜ್ 2.0' ಆ್ಯಪ್ ಬಿಡುಗಡೆ ಮಾಡಿದೆ.

'ಇಂಡಿಯನ್ ಹೆರಿಟೇಜ್' ಹೆಸರಿನ ಬಳಕೆದಾರರ ಸ್ನೇಹಿಯಾಗಿರುವ ಈ ಮೊಬೈಲ್ ಆ್ಯಪ್ ದೇಶದ ವಿವಿಧ ಐತಿಹಾಸಿಕ ಸ್ಮಾರಕಗಳ ವಿವರಗಳನ್ನು ಒಳಗೊಂಡಿದೆ. ಎಎಸ್ಐ ಪರಿಮಿತಿಯಲ್ಲಿ ದೇಶದಾದ್ಯಂತ 3,697 ಸ್ಮಾರಕಗಳಿವೆ.

ಈ ಸ್ಮಾರಕಗಳು ದೇಶದ ಶ್ರೀಮಂತ, ಸಾಂಸ್ಕೃತಿಕ ಪರಂಪರೆಯ ಅಭಿವ್ಯಕ್ತಿಯಾಗಿವೆ. ಜೊತೆಗೆ ದೇಶದ ಆರ್ಥಿಕತೆ ಪ್ರಗತಿಯನ್ನು ಬಿಂಬಿಸುವಲ್ಲಿಯೂ ಗಣನೀಯ ಪಾತ್ರವಹಿಸಲಿವೆ ಎಂದು ಸಂಸ್ಕೃತಿ ಸಚಿವಾಲಯವು ತಿಳಿಸಿದೆ.

ಮೊಬೈಲ್ ಆ್ಯಪ್ ಬಿಡುಗಡೆ ಕಾರ್ಯಕ್ರಮದಲ್ಲಿ ವರ್ಚುಯಲ್ ಸ್ವರೂಪದಲ್ಲಿ ಭಾಗವಹಿಸಿದ್ದ ಕೇಂದ್ರ ಪ್ರವಾಸೋದ್ಯಮ ಸಚಿವ ಜಿ.ಕಿಷನ್ ರೆಡ್ಡಿ ಅವರು, ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಲು ಭಾಗಿದಾರರು ಮುಂದೆ ಬರಬೇಕು ಎಂದು ಕೋರಿದರು.

'ಅಡಾಪ್ಟ್ ಹೆರಿಟೇಜ್ 2.0' ಕಾರ್ಪೊರೇಟ್ ಭಾಗಿದಾರರ ಜೊತೆಗೆ ಸಹಭಾಗಿತ್ವ ಹೊಂದಲು ಒತ್ತು ನೀಡಲಿದೆ. ಸ್ಮಾರಕಗಳನ್ನು ಮುಂದಿನ ಪೀಳಿಗೆಗೆ ಉಳಿಸಲು ದತ್ತು ಪಡೆಯುವ ಮೂಲಕ ನೆರವಾಗಬಹುದಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಇದು, 2017ರಲ್ಲಿ ಪ್ರಕಟಿಸಿದ್ದ ಯೋಜನೆಯ ಪರಿಷ್ಕೃತ ರೂಪವಾಗಿದೆ. ಕಾರ್ಪೊರೇಟ್ ಸಂಸ್ಥೆಗಳ ಸಿಎಸ್ಆರ್ ನಿಧಿ ಬಳಸಿ ಸೌಲಭ್ಯ ಉತ್ತಮಪಡಿಸುವುದು ಇದರ ಉದ್ದೇಶವಾಗಿದೆ. ಕಾಯ್ದೆಯ ಅನುಸಾರ ಭಿನ್ನ ಸ್ಮಾರಕಗಳ ರಕ್ಷಣೆಗೆ ಬೇಕಾದ ಅಂಶಗಳನ್ನೂ ಉಲ್ಲೇಖಿಸಲಿದೆ. ಸ್ಮಾರಕಗಳ ದತ್ತು ಪ್ರಕ್ರಿಯೆಯ ವಿವಿಧ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.



**ಜನ್ಮಾಷ್ಟಮಿ** ಮುಂಬೈನ ಶಿವಾಜಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ಮಂಗಳವಾರ ಮೊಸರು ಕುಡಿಕೆ ಒಡೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು -ಪಿಟಿಐ ಚಿತ್ರ




Officers Adda

- **ಸ್ಮಾರಕ ರಕ್ಷಣೆಗೆ ಆಪ್ ಬಿಡುಗಡೆ**

- ಸ್ಮಾರಕಗಳ ರಕ್ಷಣೆಗಾಗಿ ಕಾರ್ಪೊರೇಟ್ ಬಾಗಿದಾರರ ಸಹಭಾಗಿತ್ವ ಪಡೆಯುವ ಉದ್ದೇಶದಿಂದ ಭಾರತೀಯ ಪುರಾತತ್ವ ಇಲಾಖೆಯು ಎಎಸ್ಐ ,ಅಡಾಪ್ಟ್ ಎ ಹೆರಿಟೇಜ್ 2.0 ಆ ಪ್ ಬಿಡುಗಡೆ ಮಾಡಿದೆ.

- ಇಂಡಿಯನ್ ಹೆರಿಟೇಜ್ ಹೆಸರಿನ ಬಳಕೆದಾರರ ಸ್ನೇಹಿ ಆಗಿರುವ ಈ ಮೊಬೈಲ್ ಆಪ್ ದೇಶದ ವಿವಿಧ ಐತಿಹಾಸಿಕ ಸ್ಮಾರಕಗಳ ವಿವರಗಳನ್ನು ಒಳಗೊಂಡಿದೆ. ಎ ಎಸ್ ಐ ಪರಿಮಿತಿಯಲ್ಲಿ ದೇಶದಾದ್ಯಂತ 3697 ಸ್ಮಾರಕಗಳಿವೆ.

Officers Adda



# ರಾಜ್ಯಸಭೆಯಲ್ಲಿ 25 ಮಸೂದೆಗಳಿಗೆ ಒಪ್ಪಿಗೆ ಬಾಕಿ

ನವದೆಹಲಿ(ಪಿಟಿಐ): ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಎರಡಕ್ಕಿಂತ ಹೆಚ್ಚು ಮಕ್ಕಳು ಇರಬಾರದೆಂದು 1992ರಲ್ಲಿ ಮಂಡಿಸಿರುವ ಮಸೂದೆಯೂ ಸೇರಿದಂತೆ ಒಟ್ಟು 25 ಮಸೂದೆಗಳಿಗೆ ರಾಜ್ಯಸಭೆಯಲ್ಲಿ ಇನ್ನೂ ಒಪ್ಪಿಗೆ ಸಿಕ್ಕಿಲ್ಲ.

ಲೋಕಸಭೆಯು ವಿಸರ್ಜನೆಯಾದಾಗಷ್ಟೇ ಅಲ್ಲಿ ಮಂಡಿಸಿರುವ ಮಸೂದೆಗಳ ಅಂಗೀಕಾರಕ್ಕೆ ವಿಳಂಬವಾಗುತ್ತದೆ. ಆದರೆ, ಮೇಲ್ಮನೆಯು ಎಂದಿಗೂ ವಿಸರ್ಜನೆಯಾಗುವುದಿಲ್ಲ. ಅದು ಸಂಸತ್‌ನ ಶಾಶ್ವತ ಸದನವಾಗಿದೆ. ಸರ್ಕಾರ ವಾಪಸ್ ಪಡೆಯದ ಹೊರತು ರಾಜ್ಯಸಭೆಯಲ್ಲಿಯೇ ಮಸೂದೆ ಉಳಿಯುತ್ತದೆ.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮನೆ ಬಾಡಿಗೆಗೆ ಮಿತಿಹೇರಿಕೆ, ಮನೆಗಳ ದುರಸ್ತಿ ಹಾಗೂ ಬಾಡಿಗೆದಾರರ ಹಿತರಕ್ಷಣೆಗೆ ಸಂಬಂಧಿಸಿ ದೆಹಲಿ ಬಾಡಿಗೆ (ತಿದ್ದುಪಡಿ) ಮಸೂದೆ, ಭಾರತೀಯ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ತಿದ್ದುಪಡಿ ಮಸೂದೆಗೆ ಮೇಲ್ಮನೆಯಲ್ಲಿ ಅಂಗೀಕಾರ ನೀಡಿಲ್ಲ ಎಂದು ರಾಜ್ಯಸಭೆಯ ಪ್ರಕಟಣೆ ತಿಳಿಸಿದೆ.

ಸಂವಿಧಾನ (79ನೇ ತಿದ್ದುಪಡಿ) ಮಸೂದೆಯು ಮೇಲ್ಮನೆಯಲ್ಲಿ ಅಂಗೀಕಾರಕ್ಕೆ ದೀರ್ಘಕಾಲದಿಂದ ಕಾದು ಕುಳಿತಿದೆ. ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಎರಡಕ್ಕಿಂತ ಹೆಚ್ಚು ಮಕ್ಕಳು ಇರಬಾರದು ಎಂದು ಇದರಲ್ಲಿ ಪ್ರಸ್ತಾಪಿಸಲಾಗಿದೆ.




Officers Adda

- ರಾಜ್ಯಸಭೆಯಲ್ಲಿ 25 ಮಸೂದೆಗಳಿಗೆ ಒಪ್ಪಿಗೆ ಬಾಕಿ

- ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಎರಡಕ್ಕಿಂತ ಹೆಚ್ಚು ಮಕ್ಕಳು ಇರಬಾರದೆಂದು 1992 ರಲ್ಲಿ ಮಂಡಿಸಿರುವ ಮಸೂದೆಯು ಸೇರಿದಂತೆ ಒಟ್ಟು 25 ಮಸೂದೆಗಳಿಗೆ ರಾಜ್ಯಸಭೆಯಲ್ಲಿ ಇನ್ನೂ ಒಪ್ಪಿಗೆ ಸಿಕ್ಕಿಲ್ಲ.

- ಲೋಕಸಭೆಯು ವಿಸರ್ಜನೆಯಾದಾಗಷ್ಟೇ ಅಲ್ಲಿ ಮಂಡಿಸಿರುವ ಮಸೂದೆಗಳ ಅಂಗೀಕಾರಕ್ಕೆ ವಿಳಂಬವಾಗುತ್ತದೆ. ಆದರೆ ಮೇಲ್ಮನೆಯು ಎಂದಿಗೂ ವಿಸರ್ಜನೆ ಆಗುವುದಿಲ್ಲ. ಅದು ಸಂಸತ್ ನ ಶಾಶ್ವತ ಸದನವಾಗಿದೆ. ಸರ್ಕಾರ ವಾಪಸ್ ಪಡೆಯದ ಹೊರತು ರಾಜ್ಯಸಭೆಯಲ್ಲಿಯೇ ಮಸೂದೆ ಉಳಿಯುತ್ತದೆ.

Officers Adda





# ಪ್ರಾದೇಶಿಕ ಸಮಗ್ರತೆ ಬಲಪಡಿಸಲು ಯತ್ನ

## ಸಹಕಾರ ವಿಸ್ತರಣೆಗೆ 12 ಅಂಶಗಳ ಪ್ರಸ್ತಾವ

## ಆಹಾರ ಭದ್ರತೆ ಖಾತ್ರಿಗೆ ಅಕ್ಕಿ, ಸಿರಿಧಾನ್ಯಗಳ ಮೇಲೆ ಗಮನ

## ಟಿಮೋರ್ ಲೆಸ್ಟ್‌ನಲ್ಲಿ ರಾಯಭಾರ ಕಚೇರಿ




Officers Adda

- ದಕ್ಷಿಣ ಚೀನಾ ಸಮುದ್ರದ ಮೇಲಿನ ಹಕ್ಕು ಪ್ರತಿಪಾದಿಸುವ ಚೀನಾದ ಪ್ರಮಾಣಿತ ನಕ್ಷೆಯನ್ನು ಮಲೇಶಿಯಾ ವಿಯೆಟ್ನಾಂ ಮತ್ತು ಆಶಿಯನ್ ರಾಷ್ಟ್ರಗಳು ವಿರೋಧಿಸಿದ್ದವು.

- ತೈವಾನ್ ದಕ್ಷಿಣ ಚೀನಾ ಸಮುದ್ರ
- ಅರುಣಾಚಲ ಪ್ರದೇಶ ಮತ್ತು ಅಕ್ಷಯ್ಚಿನ್ ಅನ್ನು ಒಳಗೊಂಡ ಪ್ರಮಾಣಿತ ನಕ್ಷೆಯು 2023 ಆವೃತ್ತಿಯನ್ನು ಚೀನಾ ಆಗಸ್ಟ್ 28ರಂದು ಬಿಡುಗಡೆ ಮಾಡಿದೆ. ಭಾರತವು ಈ ನಕ್ಷೆಗೆ ಆಕ್ಷೇಪ ವ್ಯಕ್ತಪಡಿಸಿದೆ.








# ‘ವಿವಿಪ್ಯಾಟ್ ಪೂರ್ಣ ಪರಿಶೀಲನೆ ಇಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾನ ಪ್ರಕ್ರಿಯೆಯಲ್ಲಿ ವಿದ್ಯುನ್ಮಾನ ಮತಯಂತ್ರದ (ಇವಿಎಂ) ಜೊತೆಗೆ ಬಳಕೆ ಮಾಡುವ ವಿವಿಪ್ಯಾಟ್ ಚೀಟಿಗಳ ಶೇ 100ರಷ್ಟು ಪರಿಶೀಲನೆಯು ವಾಸ್ತವವಾಗಿ ಸಾಧ್ಯವಿಲ್ಲ. ಒಂದು ವೇಳೆ ಇದಕ್ಕೆ ಅನುಮತಿ ನೀಡಿದರೆ ಹಳೆಯ ಬ್ಯಾಲೆಟ್ ಪದ್ಧತಿಗೆ (ಮತಪತ್ರಕ್ಕೆ ಮುದ್ರೆ ಒತ್ತಿ ಮತಪೆಟ್ಟಿಗೆಗೆ ಹಾಕುವುದು) ಮರಳಿದಂತಾಗುತ್ತದೆ ಎಂದು ಕೇಂದ್ರ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಿಳಿಸಿದೆ.

ಜೊತೆಗೆ, ತಾವು ನಿರ್ದಿಷ್ಟ ಅಭ್ಯರ್ಥಿಗೆ ಮತದಾನ ಮಾಡಿದ್ದೇವೆಯೇ ಎಂಬುದನ್ನು ವಿವಿಪ್ಯಾಟ್‌ಗಳ ಮೂಲಕ ಖಚಿತಪಡಿಸಿಕೊಳ್ಳುವುದು ಮತದಾರರ ಮೂಲಭೂತ ಹಕ್ಕಲ್ಲ ಎಂದು ಆಯೋಗವು ಪ್ರತಿಪಾದಿಸಿದೆ.

ಇವಿಎಂನಲ್ಲಿ ದಾಖಲಾಗಿರುವ ಮತಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಅನುಮಾನ ವ್ಯಕ್ತಪಡಿಸಿದಾಗ ಮಾತ್ರ ವಿವಿಪ್ಯಾಟ್‌ಗಳಲ್ಲಿನ ಎಲ್ಲ ಚೀಟಿಗಳನ್ನು ಎಣಿಕೆ ಮಾಡಲಾಗುತ್ತದೆ ಎಂದು ತಿಳಿಸಿದೆ.

7ನೇ ಪುಟ ನೋಡಿ




Officers Adda

- ವಿ ವಿ ಪ್ಯಾಟ್ ಪೂರ್ಣ ಪರಿಶೀಲನೆ ಇಲ್ಲ

- ಮತದಾನ ಪ್ರಕ್ರಿಯೆಯಲ್ಲಿ ವಿದ್ಯುನ್ಮಾನ ಮತ ಯಂತ್ರದ ( ಇ ವಿಎಂ ) ಜೊತೆಗೆ ಬಳಕೆ ಮಾಡುವ ವಿ ವಿ ಪ್ಯಾಟ್ ಚೀಟಿಗಳ ಶೇಕಡಾ ನೂರರಷ್ಟು ಪರಿಶೀಲನೆಯು ವಾಸ್ತವವಾಗಿ ಸಾಧ್ಯವಿಲ್ಲ.

- ಒಂದು ವೇಳೆ ಇದಕ್ಕೆ ಅನುಮತಿ ನೀಡಿದರೆ ಹಳೆಯ ಬ್ಯಾಲೆಟ್ ಪದ್ಧತಿಗೆ ( ಮತಪತ್ರಕ್ಕೆ ಮುದ್ರೆ ಒತ್ತಿ ಮತ ಪೆಟ್ಟಿಗೆಗೆ ಹಾಕುವುದು ) ಮರಳಿದಂತಾಗುತ್ತದೆ . ಎಂದು ಕೇಂದ್ರ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್ ಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಿಳಿಸಿದೆ .

- ಜೊತೆಗೆ, ತಾವು ನಿರ್ದಿಷ್ಟ ಅಭ್ಯರ್ಥಿಗೆ ಮತದಾನ ಮಾಡಿದ್ದೇವೆಯೇ ಎಂಬುದನ್ನು ವಿ ವಿ ಪ್ಯಾಟ್ ಗಳ ಮೂಲಕ ಖಚಿತಪಡಿಸಿಕೊಳ್ಳುವುದು ಮತದಾರರ ಮೂಲಭೂತ ಹಕ್ಕಲ್ಲ ಎಂದು ಆಯೋಗವು ಪ್ರತಿಪಾದಿಸಿದೆ.

- ಇವಿಎಂನಲ್ಲಿ ದಾಖಲಾಗಿರುವ ಮತಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಅನುಮಾನ ವ್ಯಕ್ತಪಡಿಸಿದಾಗ ಮಾತ್ರ ವಿವಿಪ್ಯಾಟ್ಗಳಲ್ಲಿನ ಎಲ್ಲಾ ಚೀಟಿಗಳನ್ನು ಎಣಿಕೆ ಮಾಡಲಾಗುತ್ತದೆ ಎಂದು ತಿಳಿಸಿದೆ.

Officers Adda



Officers Adda

# ಐ–ಸಿಆರ್‌ಆರ್ ಕೈಬಿಡಲು ನಿರ್ಧಾರ

ಮುಂಬೈ (ಪಿಟಿಐ): ಹೆಚ್ಚುವರಿ ನಗದು ಮೀಸಲು ಅನುಪಾತ (ಐ-ಸಿಆರ್‌ಆರ್) ವ್ಯವಸ್ಥೆಯನ್ನು ಹಂತ ಹಂತವಾಗಿ ಕೈಬಿಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತೀರ್ಮಾನಿಸಿದೆ.

₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ತೀರ್ಮಾನ ಕೈಗೊಂಡ ನಂತರದಲ್ಲಿ ಹಣಕಾಸು ವ್ಯವಸ್ಥೆಯಲ್ಲಿ ನಗದು ಲಭ್ಯತೆ ಹೆಚ್ಚಾಗಿದ್ದುದನ್ನು ತಗ್ಗಿಸುವ ಉದ್ದೇಶದಿಂದ ಇದನ್ನು ಜಾರಿಗೆ ತರಲಾಗಿತ್ತು.

ಐ-ಸಿಆರ್‌ಆರ್ ಪಾಲನೆ ಮಾಡಬೇಕು ಎಂದು ಆರ್‌ಬಿಐ, ಬ್ಯಾಂಕ್‌ಗಳಿಗೆ ಆಗಸ್ಟ್ 10ರಂದು ಸೂಚನೆ ನೀಡಿತ್ತು. ಈ ಸೂಚನೆಯನ್ನು ಸೆಪ್ಟೆಂಬರ್ 8ರಂದು ಅಥವಾ ಅದಕ್ಕೂ ಮೊದಲು ಪುನರ್ ಪರಿಶೀಲಿಸಲಾಗುವುದು ಎಂದು ಕೂಡ ಆಗ ಹೇಳಿತ್ತು.

**ಮುಖ್ಯಾಂಶಗಳು**

- ಐ-ಸಿಆರ್‌ಆರ್ ಕ್ರಮ ತಾತ್ಕಾಲಿಕ ಎಂದಿದ್ದ ಗವರ್ನರ್
- ವ್ಯವಸ್ಥೆಯಲ್ಲಿನ ಹೆಚ್ಚುವರಿ ನಗದನ್ನು ಹಿಂಪಡೆಯಲು ಜಾರಿಗೊಳಿಸಿದ್ದ ಕ್ರಮ

ಐ-ಸಿಆರ್‌ಆರ್ ಕ್ರಮವು ತಾತ್ಕಾಲಿಕ ಮಾತ್ರ ಎಂಬ ಸೂಚನೆಯನ್ನು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರೂ ಆಗ ನೀಡಿದ್ದರು. 'ಪರಿಶೀಲನೆಯ ನಂತರ, ಐ-ಸಿಆರ್‌ಆರ್ ಅಗತ್ಯವನ್ನು ಹಂತ ಹಂತವಾಗಿ ಕೈಬಿಡಲು ತೀರ್ಮಾನಿಸಲಾಗಿದೆ' ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ.

ಬ್ಯಾಂಕ್‌ಗಳು ಆರ್‌ಬಿಐನಲ್ಲಿ




ಇರಿಸಿರುವ ಐ-ಸಿಆರ್‌ಆರ್ ಮೊತ್ತದಲ್ಲಿ ಶೇ 25ರಷ್ಟನ್ನು ಶನಿವಾರ ಬಿಡುಗಡೆ ಮಾಡಲಾಗುತ್ತದೆ. ಸೆಪ್ಟೆಂಬರ್ 23ರಂದು ಇನ್ನೂ ಶೇ 23ರಷ್ಟನ್ನು ಬಿಡುಗಡೆ ಮಾಡಲಾಗುತ್ತದೆ. ಇನ್ನುಳಿದ ಮೊತ್ತವನ್ನು ಅಕ್ಟೋಬರ್ 7ರಂದು ಬಿಡುಗಡೆ ಮಾಡಲಾಗುತ್ತದೆ ಎಂದು ಆರ್‌ಬಿಐ ಹೇಳಿದೆ.

₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ತೀರ್ಮಾನ ಹೊರಬಿದ್ದ ನಂತರದಲ್ಲಿ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ನಗದು ಲಭ್ಯತೆಯು ಗಣನೀಯವಾಗಿ ಹೆಚ್ಚಾಗಿತ್ತು. ಹೆಚ್ಚುವರಿ ನಗದನ್ನು ಹಣಕಾಸು ವ್ಯವಸ್ಥೆಯಿಂದ ಹೊರತೆಗೆಯುವ ಉದ್ದೇಶದಿಂದ ಐ-ಸಿಆರ್‌ಆರ್ ಕ್ರಮ ಪ್ರಕಟಿಸಲಾಗಿತ್ತು.

₹2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ಪ್ರಕಟಣೆಯನ್ನು ಆರ್‌ಬಿಐ ಹೊರಡಿಸಿದ್ದು ಮೇ 19ರಂದು. ಆ ದಿನ ಚಲಾವಣೆಯಲ್ಲಿ ₹2,000 ಮುಖಬೆಲೆಯ ನೋಟುಗಳ ಪೈಕಿ ಶೇ 93ರಷ್ಟು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬಂದಿವೆ.

ಆಗಸ್ಟ್ 31ರವರೆಗೆ ಬ್ಯಾಂಕುಗಳು ಒಟ್ಟು ₹3.32 ಲಕ್ಷ ಕೋಟಿ ಮೌಲ್ಯದ ₹2,000 ಮುಖಬೆಲೆಯ ನೋಟುಗಳನ್ನು ಮರಳಿ ಸ್ವೀಕರಿಸಿವೆ.



- ಐಸಿಆರ್ ಆರ್

- ಹೆಚ್ಚುವರಿ ನಗದು ಮೀಸಲು ಅನುಪಾತ
- ಐಸಿಆರ್ ಆರ್ ವ್ಯವಸ್ಥೆಯನ್ನು ಹಂತ ಹಂತವಾಗಿ ಕೈಬಿಡಲು ಭಾರತೀಯ ರಿಸರ್ವ್ ಬ್ಯಾಂಕ್ ( ಆರ್ಬಿಐ ) ತೀರ್ಮಾನಿಸಿದೆ.
- ₹ 2000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ತೀರ್ಮಾನ ಕೈಗೊಂಡ ನಂತರದಲ್ಲಿ ಹಣಕಾಸು ವ್ಯವಸ್ಥೆಯಲ್ಲಿ ನಗದು ಲಭ್ಯತೆ ಹೆಚ್ಚಾಗಿದ್ದು ಅದನ್ನು ತಗ್ಗಿಸುವ ಉದ್ದೇಶದಿಂದ ಇದನ್ನು ಜಾರಿಗೆ ತರಲಾಗಿತ್ತು

- ₹ 2,000 ಮುಖಬೆಲೆಯ ನೋಟುಗಳ ಪೈಕಿ ಶೇಕಡ 93 ರಷ್ಟು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿ ಬಂದಿವೆ.

- ಆಗಸ್ಟ್ 31ರವರೆಗೆ ಬ್ಯಾಂಕುಗಳು ಒಟ್ಟು ₹ 3.32 ಲಕ್ಷ ಕೋಟಿ ಮೌಲ್ಯದ ₹ 2,000 ಮುಖಬೆಲೆಯ ನೋಟುಗಳನ್ನು ಮರಳಿ ಸ್ವೀಕರಿಸುವೆ.

Officers Adda



# ONE LINERS

Officers Adda

- ಇತ್ತೀಚಿಗೆ ದೇಶದ ಮೊದಲ "Onsite iconic Eyes Museum" ಅನ್ನು ತಮಿಳುನಾಡು ನಲ್ಲಿ ಸ್ಥಾಪಿಸಲಾಗಿದೆ.
- ಸೆಪ್ಟೆಂಬರ್ 8 ರಂದು "ವಿಶ್ವ ಫಿಸಿಯೋಥೆರಪಿ ದಿನ" ವನ್ನು ಆಚರಿಸಲಾಗುತ್ತದೆ .
- ಸೆಪ್ಟೆಂಬರ್ 8 ರಂದು "ಅಂತರಾಷ್ಟ್ರೀಯ ಸಾಕ್ಷರತಾ ದಿನ"ವನ್ನು ಆಚರಿಸಲಾಗುತ್ತದೆ .
- ಇತ್ತೀಚಿಗೆ ಸುದ್ದಿಯಲ್ಲಿದ್ದ 'Locked Shields" ಎಂದರೆ ವಿಶ್ವದ ಅತಿದೊಡ್ಡ ಸೈಬರ್ ರಕ್ಷಣಾ ವ್ಯಾಯಾಮ ಆಗಿದೆ.
- ನವ ದೆಹಲಿ ನಗರದ ಮೆಟ್ರೋ ರೈಲ್ವೆಯು "Tourist Smart Cards" ಗಳನ್ನು ಪ್ರಾರಂಭಿಸಿದೆ.

Officers Adda

- ಭಾರತದ ಅಧ್ಯಕ್ಷತೆಯಲ್ಲಿ ನಡೆಯಲಿರುವ G20 ಶೃಂಗಸಭೆಯಲ್ಲಿ 'ಅತಿಥಿ ರಾಷ್ಟ್ರಗಳು' ಎಂದು 9 ದೇಶಗಳನ್ನು ಆಹ್ವಾನಿಸಲಾಗಿದೆ.
- ಇತ್ತೀಚಿಗೆ ಬಿಡುಗಡೆಯಾದ 'ನಮನ್'( NAMAN)ಪ್ರಾಜೆಕ್ಟ್ ಅನ್ನು ಭಾರತೀಯ ಸೇನೆ ಪ್ರಾರಂಭಿಸಿದೆ.
- ವಿಶ್ವ ಆರೋಗ್ಯ ಅಂಕಿಅಂಶಗಳ ವರದಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಯಿಂದ ಪ್ರಕಟಿಸಲಾಗುತ್ತದೆ.
- 6ನೇ ಯುವ ಮಹಿಳಾ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಹರಿಯಾಣ ರಾಜ್ಯ ಪಡೆದಿದೆ.

Officers Adda

- ಮಾನಸಿಕ ಆರೋಗ್ಯಕ್ಕೆ ಮೀಸಲಾದ ಭಾರತದ ಮೊದಲ ಚಾಟ್‌ಬಾಟ್"Tele-Maną"ಅನ್ನು ಜಮ್ಮು ಮತ್ತು ಕಾಶ್ಮೀರ ಪ್ರಾರಂಭಿಸಲಾಗಿದೆ.

- ಇತ್ತೀಚೆಗೆ ಸುದ್ದಿಯಲ್ಲಿ ಚರ್ಚಿಸಲಾದ ಉಮಿಯಂ ಸರೋವರ (Umiam Lake) ವು ಮೇಘಾಲಯ ರಾಜ್ಯದಲ್ಲಿದೆ.

- ಇತ್ತೀಚೆಗೆ ಸುದ್ದಿಯಲ್ಲಿದ್ದ 'Dholpur-Karauli' ಹುಲಿ ಸಂರಕ್ಷಿತ ಪ್ರದೇಶಗಳು ರಾಜಸ್ಥಾನ ರಾಜ್ಯಕ್ಕೆ ಸಂಬಂಧಿಸಿದೆ.

- ಇತ್ತೀಚಿಗೆ ಸುದ್ದಿಯಲ್ಲಿದ್ದ "ಗಂಡಕ್–ಗಂಗಾ"(Gandak-Gang) ನದಿ ಜೋಡಣೆ ಯೋಜನೆ ಬಿಹಾರ ರಾಜ್ಯಕ್ಕೆ ಸಂಬಂಧಿಸಿದೆ.

Officers Adda

# GOLDEN THOUGHT

Goals that are not written down are just wishes.

# ಹಿಂದಿನ ಪ್ರಚಲಿತ ವಿದ್ಯಮಾನಗಳ ಆಧಾರಿತ ಪ್ರಶ್ನೆಗಳು

Officers Adda

**1)ಇತ್ತೀಚಿಗೆ ಸುದ್ದಿಯಲ್ಲಿದ್ದ ವಿಶ್ವವಿಖ್ಯಾತ 'ಶ್ರಾವಣಿ ಮೇಳ' ಎಲ್ಲಿ ನಡೆಯುತ್ತದೆ?**

1) ಜಾರ್ಖಂಡ್

2) ಮಧ್ಯ ಪ್ರದೇಶ್

3) ಮಹಾರಾಷ್ಟ್ರ

4) ಆಂಧ್ರ ಪ್ರದೇಶ್

Officers Adda

2)ಇತ್ತೀಚೆಗೆ,2023ರ ಎರಡನೇ 'ನೇವಿ ಕಮಾಂಡರ್ಸ್'ಸಮ್ಮೇಳನವು ಈ ಕೆಳಗಿನ ಯಾವ ಸ್ಥಳದಲ್ಲಿ ಪ್ರಾರಂಭವಾಗಿದೆ ?

1) ನವದೆಹಲಿ

2) ಅಹಮದಾಬಾದ್

3) ಅಲಹಾಬಾದ್

4) ಬೆಂಗಳೂರು

Officers Adda

3)'Share(dot)Market' ಎಂಬ ಹೊಸ ಮೊಬೈಲ್ ಅಪ್ಲಿಕೇಶನ್ ಅನ್ನು ಯಾವ ಕಂಪನಿ ಪ್ರಾರಂಭಿಸಿದೆ?

1) PhonePe

2) Google pay

3) Paytm

4) ಮೇಲಿನ ಯಾವುದೂ ಅಲ್ಲ

Officers Adda

4) ಇತ್ತೀಚೆಗೆ,ಯಾವ ರಾಜ್ಯದಲ್ಲಿ 'ರಾಮಾಯಣ ಪಾರ್ಕ್' ನಿರ್ಮಾಣವಾಗಲಿದೆ ?

1) ಉತ್ತರ ಪ್ರದೇಶ

2) ಮಧ್ಯ ಪ್ರದೇಶ್

3) ತೆಲಂಗಾಣ

4) ತಮಿಳುನಾಡು

Officers Adda

Officers Adda

# ಪ್ರಚಲಿತ ವಿದ್ಯಮಾನಗಳ ಆಧಾರಿತ ಪ್ರಶ್ನೆಗಳು

Officers Adda

**1) ದೇಶದ ಮೊದಲ "Onsite iconic Eyes Museum" ಅನ್ನು ಎಲ್ಲಿ ಸ್ಥಾಪಿಸಲಾಗಿದೆ?**

1) ತಮಿಳುನಾಡು

2) ಮೇಘಾಲಯ

3) ಆಂಧ್ರ ಪ್ರದೇಶ

4) ಮಧ್ಯ ಪ್ರದೇಶ

Officers Adda

2) ಯಾವ ನಗರದ ಮೆಟ್ರೋ ರೈಲ್ವೆಯು "Tourist Smart Cards"ಗಳನ್ನು ಪ್ರಾರಂಭಿಸಿದೆ?

1) ನವ ದೆಹಲಿ

2) ಜಮ್ಮು ಕಾಶ್ಮೀರ

3) ರಾಜಸ್ಥಾನ

4) ಮಹಾರಾಷ್ಟ್ರ

Officers Adda

3) ಇತ್ತೀಚೆಗೆ ಸುದ್ದಿಯಲ್ಲಿದ್ದ ‘Dholpur-Karauli’ ಹುಲಿ ಸಂರಕ್ಷಿತ ಪ್ರದೇಶಗಳು ಯಾವ ರಾಜ್ಯಕ್ಕೆ ಸಂಬಂಧಿಸಿದೆ.?

1) ರಾಜಸ್ಥಾನ

2) ಕರ್ನಾಟಕ

3) ತೆಲಂಗಾಣ

4) ಒಡಿಶಾ

Officers Adda

**4) ಇತ್ತೀಚೆಗೆ ಸುದ್ದಿಯಲ್ಲಿ ಚರ್ಚಿಸಲಾದ ಉಮಿಯಂ ಸರೋವರ (Umiam Lake) ವು ಯಾವ ರಾಜ್ಯದಲ್ಲಿದೆ?**

1) ಮೇಘಾಲಯ

2) ಸಿಕ್ಕಿಂ

3) ಅಸ್ಸಾಂ

4) ಮಿಜೋರಾಂ

Officers Adda

Officers Adda

OFFICERS ADDA

## Communication Crash Course 3.0

# Communication Paper

**ವಿಶೇಷತೆಗಳು**

ಸಾಮಾನ್ಯ ಕನ್ನಡ

ಸಾಮಾನ್ಯ ಇಂಗ್ಲಿಷ್

ಕಂಪ್ಯೂಟರ್ ಜ್ಞಾನ

ಪಿಡಿಎಫ್ ನೋಟ್ಸ್

45 ದಿನಗಳ Crash Course

Helpful for **Group C / CTI / PDO / SDA / FDA**

RECORDED AND LIVE CLASSES WITH MCQ

Last date to join
September 15,2023

**Contact : 8217546761 / 8217583629**

# LAST DATE TO JOIN

# SEPT 15, 2023

OFFICERS ADDA

# DRUSHTI 3.0


SPECIAL COURSE FOR 2 YEARS CURRENT AFFAIRS
(2022 & 2023)

SUBJECT WISE CURRENT AFFAIRS VIDEOS
2000+ VIDEOS
MONTHLY AND YEARLY SUBJECT WISE PDF
WEEKLY TEST ON DAILY CURRENT AFFAIRS

LAST DATE TO JOIN
SEPT 10,2023

CONTACT
8217546761 / 8217583629

Officers Adda



# LOWEST FEES IN KARNATAKA

WITH HEIGHEST QUALITY

# Contact no

8217546761

8217583629

Officers Adda

Officers Adda
61.1K subscribers

Kannada Medium Current Affairs for all competitive exams (PC to DC) by BHARAT sir
For more updates subscribe to
OFFICERS ADDA telegram and You tube channel

Officers Adda Telegram channel :

https://t.me/officersadda

Course Details :

https://drive.google.com/file/d/1GuP8...

app link :

https://play.google.com/store/apps/de...

follow us on insta :

https://www.instagram.com/officersadd...

Telegram channel for essay and answers writing :

https://t.me/Art_Of_Answer_Writing1


June Current Affairs :

https://drive.google.com/file/d/1JROE...

oct current affairs :

https://drive.google.com/file/d/1KePH...

december current affairs:



# THANK YOU

Officers Adda

-BY BHARAT C N